ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 5 | ಫೆಬ್ರವರಿ 1, 1981 | ಬೆಲೆ : 50 ಪೈಸೆ

ಬಜೆಟ್ ಅಧಿವೇಶನ

ಬೆಂಗಳೂರು ನಗರದ ಎಪ್ಪತ್ತು ಸಹಸ್ರ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಕಾರ್ಮಿಕರ ದೀರ್ಘಕಾಲದಿಂದ ನಡೆಯುತ್ತಿರುವ ಮುಷ್ಕರ, ಇದಕ್ಕೆ ಬೆಂಬಲವಾಗಿ ಜ. 21ರಂದು ನಡೆದ ಬೆಂಗಳೂರು ಬಂದ್, ಬೆಂಗಳೂರು ಮತ್ತು ಚಿಂತಾಮಣಿಯಲ್ಲಿ ಗೋಲಿಬಾರಿನಲ್ಲಿ ಸಾವು ನೋವು, ಕೋಲಾರ, ಚಿಂತಾಮಣಿಗಳಿಂದ ಮೊದಲ್ಗೊಂಡು ಹಲವೆಡೆ ವಿದ್ಯಾರ್ಥಿ ಚಳುವಳಿ, ಭಾರಿ ಬೆಂಬಲದೊಂದಿಗೆ ಬೆಂಗಳೂರಿನತ್ತ ಸಾಗುತ್ತಿರುವ ರೈತರ ಜಾಥಾಗಳು, ಆಳುವ ಪಕ್ಷದೊಳಗೆ ಗುಂಪುಗಾರಿಕೆ ಮತ್ತು ಅಧಿಕಾರಕ್ಕಾಗಿ ಕಚ್ಚಾಟ, ರಾಜ್ಯದ ಜನತೆಯ ಹೋರಾಟಕ್ಕೆ ಹೊಸ ತಿರುವನ್ನು ನೀಡುವುದಕ್ಕಾಗಿ ನಾಲ್ಕು ಪಕ್ಷಗಳು ಒಂದಾಗಿ ಹೋರಾಟ ನಡೆಸಲು ಮುಂದಾಗಿರುವುದು-ಈ ಹಿನ್ನೆಲೆಯಲ್ಲಿ 28ರಂದು ವಿಧಾನಸಭೆಯಲ್ಲಿ ಬಜೆಟ್ ಅಧಿವೇಶನದ ಪ್ರಾರಂಭ. ನಗರದಲ್ಲಿ ನಿಷೇಧಾಜ್ಞೆ. ವಿಧಾನಸೌಧದ ಸುತ್ತಲೂ ಸೇರಿದ್ದ ಸಹಸ್ರಾರು ಪೋಲೀಸರು ಮತ್ತು ಬಂದೋಬಸ್ತು ಮಿಲಿಟರಿ ಆಡಳಿತ ಮತ್ತು ವಿಧಾನ ಸೌಧವನ್ನು ಮಿಲಿಟರಿಯು ಸ್ವಾಧೀನಪಡಿಸಿಕೊಳ್ಳುತ್ತಿದೆಯೋ ಎನ್ನುವ ವಾತಾವರಣವನ್ನು ಕಲ್ಪಿಸಿತ್ತು.

ಸಂಪಾದಕೀಯ

ರಾಜ್ಯಪಾಲರು ಜಂಟೀ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಪ್ರಾರಂಭಿಸುತ್ತಿದ್ದಂತೆಯೇ ವಿರೋಧ ಪಕ್ಷದವರೆಲ್ಲರೂ ಕಪ್ಪು ಬಾವುಟಹಾರಿಸಿ, ಘೋಷಣೆಗಳೊಂದಿಗೆ ಸಭಾತ್ಯಾಗ ಮಾಡಿದ್ದು, ಸರ್ಕಾರದ 'ಪೋಲೀಸ್ ರಾಜ್' ನೀತಿಯನ್ನು ಪ್ರತಿಭಟಿಸುವ ಮತ್ತು ಸರ್ಕಾರದ ಜನವಿರೋಧಿ ಧೋರಣೆ ಜನತೆಯ ಕೂಗನ್ನು ಶಾಸನಸಭೆಯೊಳಗೆ ಮೊಳಗಿಸುವ ಪ್ರಯತ್ನ ನಡೆಯಿತು. ಜನತೆಯ ಹೋರಾಟ ಮತ್ತು ವಿರೋಧ ಪಕ್ಷಗಳ ಐಕ್ಯಪ್ರತಿಭಟನೆ ಹೆಚ್ಚುತ್ತಿದ್ದಂತೆಲ್ಲಾ, ಆಳುವ ಪಕ್ಷದ ಮುಖಂಡರುಗಳಲ್ಲೂ ತಳಮಳ ಜಾಸ್ತಿಯಾಗಿರುವುದು ಸ್ಪಷ್ಟ. ತೋರ್ಪಿಕೆಗೆ ಉದ್ದುದ್ದದ ಹೇಳಿಕೆಯನ್ನಿತ್ತರೂ, ಬೆಳೆದುಬರುತ್ತಿರುವ ಹೋರಾಟಗಳಿಂದ ಅಧಿಕಾರಸ್ಥಾನದಲ್ಲಿರುವವರಿಗೆ ಭಯ ಹೆಚ್ಚಿದೆ. ಈ ಪರಿಸ್ಥಿತಿಯಲ್ಲಿ ರೈತರ ಜಾಥಾಗಳನ್ನು ವಿಫಲಗೊಳಿಸುವ ಪ್ರಯತ್ನವೂ ನಡೆದಿದೆ. ಮಹಾರಾಷ್ಟ್ರದ ಅಂಟುಲೆ ಸರ್ಕಾರ ಮಾಡಿದಂತೆ, ಅಧಿವೇಶನವನ್ನು ತುರ್ತಾಗಿ ಮುಗಿಸುವುದು, ಜಾಥಾಗಳು ಬೆಂಗಳೂರಿಗೆ ಬಾರದಂತೆ ತಡೆಹಿಡಿಯುವ ಕ್ರಮಗಳನ್ನು ಕೈಗೊಳ್ಳಲು ಆಡಳಿತಪಕ್ಷವು ಯೋಚಿಸುತ್ತಿರುವ ವದಂತಿಯಿದೆ. ಆದರೆ ಜನತೆಯ ಪ್ರತಿಭಟನೆಯನ್ನು ತಡೆಯುವುದು ಸಾಧ್ಯವಿಲ್ಲ ಎಂಬುದನ್ನು ಕಾಂಗ್ರೆಸ್ ಸರ್ಕಾರ ತಿಳಿದಿರಬೇಕು.

ಜಾಥಾ ವಿಫಲಗೊಳಿಸಲು ಆಳುವ ವರ್ಗದ ಪಿತೂರಿ

ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಸರಕಾರ ಮತ್ತವರ ದಲ್ಲಾಳಿಗಳು ಜಾಥಾ ವಿಫಲಗೊಳಿಸಲು ಸನ್ನಾಹ ನಡೆಸುತ್ತಿರುವ ವರದಿ ಬಂದಿದೆ. ಈ ಶಕ್ತಿಗಳೊಂದಿಗೆ ರೈತ ನಾಯಕನೆಂದು ಸ್ವಯಂ ಘೋಷಿಸಿಕೊಂಡಿರುವ ಶ್ರೀಮಾನ್ ರುದ್ರಪ್ಪನವರೂ ಶಾಮೀಲಾಗಿದ್ದಾರೆ.

ರೈತರು ರಾಜಕೀಯ ಪಕ್ಷಗಳ ಅಡಿಯಲ್ಲಿ ಸಂಘಟಿತರಾಗಬಾರದು ಎಂಬುದು ಶ್ರೀ ರುದ್ರಪ್ಪನವರ ವಿಚಾರಧಾರೆ; ಯಾವದೇ ಸಂಘಟನೆ ಅಥವಾ ವ್ಯಕ್ತಿಗಳು ರಾಜಕೀಯಪಕ್ಷಗಳಿಂದ ಹೊರಗುಳಿಯುವದು ಅಸಾಧ್ಯ. ಶ್ರೀ ರುದ್ರಪ್ಪ ಮತ್ತವರ ಗುಂಪು ಸರಕಾರದೊಂದಿಗೆ ಸೇರಿ, ಬೆಳೆದು ಬರುತ್ತಿರುವ ರೈತ ಹೋರಾಟವನ್ನು ಮೊಟಕುಗೊಳಿಸಲು ಕಾರಣರಾದರು. ಕಬ್ಬಿನ ಬೆಳೆಗಾರರ ಬೇಡಿಕೆಗಳು ಹೆಚ್ಚುಕಡಿಮೆ ಪೂರೈಸಲ್ಪಟ್ಟಾಗ ರೈತ ವಿಭಾಗದ ಇತರ ಬೇಡಿಕೆಗಳನ್ನು ನಿರ್ಲಕ್ಷಿಸಿದರು. ರೈತ ಕಾರ್ಯಕರ್ತರ ಮೇಲೆ ದಾಖಲು ಮಾಡಿರುವ ಮೊಕದ್ದಮೆಗಳು ಮತ್ತು ನಿಶ್ಶರ್ತವಾಗಿ ಬಂಧಿತರ ಬಿಡುಗಡೆ ಇತ್ಯಾದಿ ಪ್ರಮುಖ ಬೇಡಿಕೆಗಳನ್ನು ಕೈಬಿಡಲಾಯಿತು. ರೈತ ಕಾರ್ಮಿಕರು ಪರಸ್ಪರ ವೈರಿಗಳು ಎಂಬ ಮನೋಭಾವ ಬಿತ್ತಿದುಡಿಯುವ ಜನವಿಭಾಗವನ್ನು ಪ್ರತ್ಯೇಕಿಸುವ ಗಂಡಾಂತರಕಾರಿ ಬೆಳವಣಿಗೆ ಕಂಡುಬಂದಿತು. ನಿರ್ಲಕ್ಷ್ಯಕ್ಕೊಳಗಾಗಿರುವ ಕೃಷಿ ಕೂಲಿಗಾರರ ಬೇಡಿಕೆಗಳನ್ನು ಕಡೆಗಣಿಸಲಾಯಿತು. ತುಮಕೂರಿನಲ್ಲಿ ರೈತ ಜಾಥಾವನ್ನು ತಡೆಗಟ್ಟಲು ಕಾಂಗ್ರೆಸ್ ಧುರೀಣರು ಆದೇಶ ನೀಡಿದ್ದಾರೆಂಬ ಪತ್ರಿಕಾ ವರದಿ ಬಂದಿದೆ. ಇದು ನಿಜವಾದಲ್ಲಿ ಸರ್ಕಾರವೇ ಮುಂದಿನ ಆಗುಹೋಗುಗಳಿಗೆ ಜವಾಬ್ದಾರಿಯಾಗಬೇಕಾದೀತು!

ನಾಲ್ಕು ಪಕ್ಷಗಳ ನೇತೃತ್ವದಲ್ಲಿ ರೂಪುಗೊಂಡಿರುವ ಪ್ರಗತಿಪರ ಜನತಂತ್ರ ರಂಗದ ಕಾರ್ಯಕ್ರಮ ಕೇವಲ ಜಾಥಾಕ್ಕೆ ಮಾತ್ರ ಸೀಮಿತವಲ್ಲ, ಸಮಸ್ಯೆಗಳಲ್ಲಿ ತೊಳಲಾಡುತ್ತಿರುವ ರೈತರು, ಕಾರ್ಮಿಕರು, ವಿದ್ಯಾರ್ಥಿ-ಯುವಜನರು, ಮಹಿಳೆಯರು ಮೊದಲಾದ ಜನವಿಭಾಗವನ್ನು ಸಂಘಟಿಸುವ ಜವಾಬ್ದಾರಿಯುಳ್ಳದ್ದಾಗಿದೆ. ಪ್ರಾಮಾಣಿಕವಾಗಿ ಶ್ರಮಿಸಲಾಗುತ್ತಿದೆ.

ಪ್ರತಿಗಾಮಿ ಶಕ್ತಿಗಳು ಜೊತೆಗೂಡಿ ಬೆಳೆದುಬರುತ್ತಿರುವ ಹೋರಾಟಗಳನ್ನು ಹತ್ತಿಕ್ಕಲು, ಬಗ್ಗುಬಡಿಯಲು ಬೇರೆ ಬೇರೆ ಮುಖವಾಡಗಳಿಂದ ಅವತರಿಸುತ್ತಿದ್ದಾರೆ. ಎಚ್ಚತ್ತ ಜನತೆಯೇ ಈ ಪ್ರತಿಗಾಮಿ ಶಕ್ತಿಗಳಿಗೆ ತಕ್ಕ ಪಾಠ ಕಲಿಸುವದು ಶತಃ ಸಿದ್ಧ.

o

ರೈತ ಜಾಥಾಗಳ ಸಂಗಮ/ಕಾರ್ಮಿಕರ ಬೆಂಬಲಗಳೊಂದಿಗೆ

ಫೆ. ೫ರಂದು ವಿಧಾನಸೌಧ ಚಲೋ

ನರಗುಂದದಿಂದ ಜನವರಿ 16ರಂದು ಹೊರಟಿರುವ ರೈತರ ಜಾಥಾವು ಬೆಂಗಳೂರಿನತ್ತ ಸಾಗುತ್ತಿದ್ದಂತೆಯೇ ಅತ್ಯುತ್ಸಾಹದ ಸ್ವಾಗತ, ಜನತೆಯ ಭಾರಿ ಬೆಂಬಲ ಕಂಡುಬರುತ್ತಿದೆ. 22ರಂದು ರಾಣೆಬೆನ್ನೂರಿಗೆ ಜಾಥಾವು ಬರುತ್ತಿದ್ದಂತೆಯೇ ಕಾಂಗ್ರೆಸ್‌ನವರು ಪಟ್ಟಣದೊಳಗೆ ರೈತರ ಹೆಸರಲ್ಲಿ ಒಂದು ಸಭೆಯನ್ನು ನಡೆಸಿ ಗೊಂದಲ ಸೃಷ್ಟಿಮಾಡಲು ಪ್ರಯತ್ನಿಸಿದ ವರದಿಯಾಗಿದೆ. ಆದರೆ ರಾಣೆಬೆನ್ನೂರಿನ ಜನತೆ ನರಗುಂದದ ಜಾಥಾಕ್ಕೆ ಪಿರೋಚಿತ ಸ್ವಾಗತನೀಡಿ ಕಾಂಗ್ರೆಸ್ಸಿನ ಕುಹಕತನಕ್ಕೆ ಉತ್ತರ ನೀಡಿದೆ. ರಾಣೆಬೆನ್ನೂರಿನಿಂದ ಹೊರಟ ಜಾಥಾವು ರಾತ್ರೆ ತುಂಬತಡವಾಗಿ 23ರಂದು ಹರಿಹರವನ್ನು ತಲುಪಿತು. ರಾತ್ರೆ ತುಂಬ ತಡವಾಗಿದ್ದರೂ ನೆರೆದಿದ್ದ ಸಹಸ್ರಾರು ಮಂದಿ ಕಾರ್ಮಿಕರು, ರೈತರು ಮತ್ತು ಇತರೆ ವಿಭಾಗದ ಜನತೆ ಹಾರ್ದಿಕ ಸ್ವಾಗತ ನೀಡಿತು. ಅಖಿಲ ಭಾರತ ಕಿಸಾನ್ ಸಭಾ ಪ್ರಧಾನಕಾರ್ಯದರ್ಶಿ ಕಾಂ. ಚಾತುಣ್ಣಿಮಾಸ್ತರ್ ಅವರು ಹರಿಹರದಲ್ಲಿ ಜಾಥಾವನ್ನು ಸೇರಿಕೊಂಡು, ಮರುದಿನ ದಾವಣಗೆರೆತನಕ ಹೋದರು. ಮಧ್ಯರಾತ್ರೆಯಾದರೂ ಜನ ಕದಲದೆ ಗಾಂಧಿಮೈದಾನದಲ್ಲಿ ಸೇರಿದ್ದ ಬಹಿರಂಗ ಸಭೆ ಮುಗಿಯುವತನಕ ಕಾದಿತ್ತು. ಕಾಂ. ಚಾತುಣ್ಣಿ ಮಾಸ್ತರ್, ಕಾಂ. ವಿ.ಎನ್. ಹಳಕಟ್ಟಿ, ಯಾವಗಲ್ ಮೊದಲಾದವರು ಭಾಷಣ ಮಾಡಿದರು.

24ರ ಬೆಳಿಗ್ಗೆ ಹರಿಹರವನ್ನು ಬಿಟ್ಟ ಜಾಥಾವು ಮಧ್ಯಾಹ್ನ ದಾವಣಗೆರೆಯನ್ನು ತಲುಪಿತು. ದಾವಣಗೆರೆಯಲ್ಲಿ ಭಾರಿ ಸಂಭ್ರಮದ ಸ್ವಾಗತ ದೊರೆಯಿತು. ದಾವಣಗೆರೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿ.ಪಿ.ಐ.ಯ ರಾಷ್ಟ್ರೀಯ ಮುಖಂಡ ಕಾಂ. ರಾಜಶೇಖರರೆಡ್ಡಿ, ಶಾಸಕ ಕಾಂ. ಪಂಪಾಪತಿ, ಕಿಸಾನ್‌ಸಭಾ ಪ್ರಧಾನಕಾರ್ಯದರ್ಶಿ ಕಾಂ. ಚಾತುಣ್ಣಿ ಮಾಸ್ತರ್, ವಿ.ಜಿ.ಕೆ. ನಾಯರ್, ಶ್ರೀ ಚಂದ್ರೇಗೌಡ ಮೊದಲಾದವರು ಭಾಷಣಮಾಡಿದರು. ಅಂದು ದಾವಣಗೆರೆಯಲ್ಲಿ ತಂಗಿದ್ದ ಜಾಥಾವು ಮರುದಿನ ಬೆಳಿಗ್ಗೆ ಹೊರಟು, ಹೆಬ್ಬಾಳು, ವಿಜಾಪುರ ಮಾರ್ಗವಾಗಿ 27ರಂದು ಮಧ್ಯಾಹ್ನ ಚಿತ್ರದುರ್ಗ ನಗರವನ್ನು ಪ್ರವೇಶಿಸಿತು. ಚಿತ್ರದುರ್ಗದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಭಾರಿ ಬಹಿರಂಗ ಸಭೆ ನಡೆಯಿತು. ಶ್ರೀ ದೇವರಾಜ ಅರಸು ಮತ್ತಿತರರು ಭಾಷಣ ಮಾಡಿದರು. 28ರಂದು ಐಮಂಗಲದಲ್ಲಿ ತಂಗಿದ್ದ ಜಾಥಾವು 29ರಂದು ಹಿರಿಯೂರನ್ನು ತಲುಪಿದ ವರದಿಯಾಗಿದೆ. ಕಾಂ. ಎನ್. ಕೆ. ಉಪಾಧ್ಯಾಯ, ಕಾಂ. ಚಂಚಲ್‌ಕರ್ ಮೊದಲಾದವರ ನೇತೃತ್ವದಲ್ಲಿ ಬಿಜಾಪುರದಿಂದ ಹೊರಟಿದ್ದ 55 ಮಂದಿಯ ರೈತರ ಜಾಥಾವು ನರಗುಂದ ಜಾಥಾವನ್ನು ಸೇರಿಕೊಂಡಿದೆ. ಬೀದರ, ಗುಲಬರ್ಗ, ರಾಯಚೂರು ಜಿಲ್ಲೆಗಳ ರೈತರ ತಂಡಗಳು ನರಗುಂದ ಜಾಥಾವನ್ನು ಸದ್ಯದಲ್ಲೆ ಸೇರಲಿವೆ. ಸಿರಾ ಮಾರ್ಗವಾಗಿ ತುಮಕೂರನ್ನು ಫೆಬ್ರವರಿ ಒಂದರಂದು ಸೇರಲಿರುವ ಜಾಥಾವನ್ನು ಸ್ವಾಗತಿಸಲು ತುಮಕೂರಿನಲ್ಲಿ ದೊಡ್ಡ ಪ್ರಮಾಣದ ತಯ್ಯಾರಿ ನಡೆಯುತ್ತಿದೆ.

ಮೈಸೂರಿನಿಂದ 30ರಂದು ಹೊರಡುವ ಜಾಥಾವು ಮಂಡ್ಯ, ಮದ್ದೂರು ಮಾರ್ಗವಾಗಿ ಫೆ. 5ಕ್ಕೆ ಬೆಳಗ್ಗೆ ಬೆಂಗಳೂರು ನಗರವನ್ನು ತಲಪಲಿದೆ. ಕೋಲಾರ ಜಿಲ್ಲೆಯ ಬಾಗೇಪಲ್ಲಿಯಿಂದ ಫೆ. 1ರಂದು ಜಾಥಾ ಹೊರಡಲಿದ್ದು ಶಿಡ್ಲಘಟ್ಟ, ಚಿಕ್ಕಬಳ್ಳಾಪುರದವರು ಇದಕ್ಕೆ ಸೇರಿಕೊಳ್ಳಲಿರುವರು. ಮುಳಬಾಗಿಲಿನಿಂದ ಫೆ. 2ರಂದು ಬೆಳಗ್ಗೆ ಜಾಥಾ ಹೊರಟು ಅಂದು ಕೋಲಾರದಲ್ಲಿ ತಂಗಿ, 3ರ ಸಂಜೆ ಹೊಸಕೋಟೆಯನ್ನು ತಲಪಲಿದೆ. ಶ್ರೀನಿವಾಸಪುರದಿಂದ 1 ರಂದು ಹೊರಟು, 2 ರಂದು ಚಿಂತಾಮಣಿಯವರೊಂದಿಗೆ ಸೇರಿಕೊಂಡು 3ರಂದು ಹೊಸಕೋಟೆಗೆ ಒಂದು ಜಾಥಾವು ಬಂದು ಕೋಲಾರ ಕಡೆಯಿಂದ ಬರುವ ಜಾಥಾವನ್ನು ಸೇರಲಿದೆ. ಹೊಸಕೋಟೆ ತಾಲ್ಲೂಕು ರೈತ ಸಂಘದವರು ಈ ಜಾಥಾವನ್ನು ಸೇರಿ, ಕೃಷ್ಣರಾಜಪುರ ಮಾರ್ಗವಾಗಿ ಬೆಂಗಳೂರಿಗೆ ಬರಲಿದೆ. ದೊಡ್ಡಬಳ್ಳಾಪುರದಿಂದ (ಬೆ.ಜಿಲ್ಲೆ) ದೊಡ್ಡ ಪ್ರಮಾಣದಲ್ಲಿ ರೈತರು ಹೊರಟು, ಬಾಗೇಪಲ್ಲಿ ಕಡೆಯಿಂದ ಬರುವ ಜಾಥಾವನ್ನು ಬೆಂಗಳೂರು ನಗರದ ಹೊರವಲಯದಲ್ಲಿ ಸೇರುವ ನಿರೀಕ್ಷೆ ಇದೆ. ಹಾಸನ ಜಿಲ್ಲೆಯ ಸಕಲೇಶಪುರದಿಂದ 30ರಂದು ಹೊರಟಿರುವ ಜಾಥಾವು ಹಾಸನ, ಕುಣಿಗಲ್ ಮಾರ್ಗವಾಗಿ ಬಂದು ನೆಲಮಂಗಲ

[ಕಡೆಯ ಪುಟ ನೋಡಿ]

ಇಂಡಾಲ್‌ನಲ್ಲಿ ವೇತನ ಹೆಚ್ಚಳದ ಬಗ್ಗೆ ಒಪ್ಪಂದ

ಅನೇಕ ದಿನಗಳಿಂದ ನನೆಗುದಿಗೆ ಬಿದ್ದಿದ್ದ ಇಂಡಾಲ್ ಕಾರ್ಮಿಕರ ಒಪ್ಪಂದ ಕೊನೆಗೂ ದಿ. 24-1-81 ರಂದು ಬೆಂಗಳೂರಿನಲ್ಲಿ ಲೇಬರ್ ಕಮೀಷನರ ಸಮ್ಮುಖದಲ್ಲಿ ನಡೆಯಿತು.

28-4-80 ರಿಂದ 6-8-80 ರ ವರೆಗೆ ದೀರ್ಘಕಾಲದವರೆಗೆ ಇಂಡಾಲ್ ಆಡಳಿತವರ್ಗ ಲಾಕ್‌ಔಟ್ ಘೋಷಿಸಿತ್ತು. ಇದೇ ಅವಧಿಯಲ್ಲಿ (31-5-1980) ಚಾರ್ಟರ್ ಆಫ್ ಡಿಮಾಂಡ್ ಸಲ್ಲಿಸಲಾಗಿತ್ತು. ಇಂಡಾಲ್‌ನಲ್ಲಿ ಬೇರೆಬೇರೆ ಯೂನಿಯನ್‌ಗಳಿರುವುದರಿಂದ ಆಡಳಿತ ವರ್ಗ ಕುಟಿಲ ನೀತಿಯನ್ನು ಅನುಸರಿಸುತ್ತಾ ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಾ ಬಂದಿತ್ತು. ಅನೇಕ ಸುತ್ತಿನ ಮಾತುಕತೆಗಳ ನಂತರ ಒಂದು ಸೌಹಾರ್ದಪೂರ್ಣ ಒಪ್ಪಂದ ಸಾಧ್ಯವಾಯಿತು.

ಈ ಒಪ್ಪಂದದ ಪ್ರಕಾರ ಪ್ರತಿಯೊಬ್ಬ ಕಾರ್ಮಿಕನಿಗೆ ತಲಾ ರೂ. 260/- (ಎಲ್ಲ ಅಲೋನ್ಸಗಳು ಸೇರಿ) ರಷ್ಟು ಪ್ರತಿ ತಿಂಗಳು ಹೆಚ್ಚಿಗೆ ದೊರೆತಂತಾಗಿದೆ. ಬೇಸಿಕ್‌ನಲ್ಲಿ 25/- ರೂ. ಅಡ್‌ಹಾಕ್ ಹೆಚ್ಚಳ, ಸರ್ವೀಸ್ ಇನಿಕ್ರಿಮೆಂಟ್ ಸರಾಸರಿ ರೂ. 25., ಡಿ.ಎ.ನಲ್ಲಿ 75/-ರೂ., ಎಚ್.ಆರ್.ಎ.ನಲ್ಲಿ, ಟ್ರಾನ್ಸ್‌ಪೋರ್ಟ್ ಮುಂತಾದ ಸೌಲಭ್ಯಗಳಲ್ಲಿ ಹೆಚ್ಚಳಗಳಾಗಿವೆ. ಇದಲ್ಲದೇ 2 ವರ್ಷಕ್ಕೊಮ್ಮೆ ರೂ. 400 ರಷ್ಟು ಎಲ್.ಟಿ.ಎ. ಸೌಲಭ್ಯ, ರೂ. 10,000 ಆಕಸ್ಮಾತ್ ಸಾವಿಗೆ ಪರಿಹಾರ, ರೂ. 10,000 ಮನೆಕಟ್ಟಲು ಸಾಲ ಸೌಲಭ್ಯ ಇತ್ಯಾದಿಗಳು ದೊರೆತಿವೆ. ಒಪ್ಪಂದ 3 ವರ್ಷಗಳಿಗೆ ಆಗಿದೆ. ಈ ಎಲ್ಲ ಸೌಲಭ್ಯಗಳೂ 1-12-80ರಿಂದ ದೊರೆಯುತ್ತವೆ. ಇದೊಂದು ಗಮನಾರ್ಹ ಅಂಶ. ಇಂಡಾಲ್ ಆಡಳಿತ ವರ್ಗ ರಿಟ್ರಾಸ್ಪೆಕ್ಟಿವ್‌ನ್ನು ಯಾವಾಗ್ಲೂ ಕೊಟ್ಟಿರಲಿಲ್ಲ.

ಒಪ್ಪಂದದಲ್ಲಿ ನಮೂದಾಗಿರುವ ಗಮನಾರ್ಹ ಅಂಶವೆಂದರೆ ರಹಸ್ಯ ಮತದಾನ ಪದ್ಧತಿಯಿಂದ ಬಹುಮತ ಪಡೆದ ಯೂನಿಯನ್ನನ್ನು ಮಾನ್ಯತೆ ಮಾಡಿ ಆದರೊಟ್ಟಿಗೆ ವ್ಯವಹರಿಸಬೇಕು ಎಂಬುದು. ಈ ಪದ್ಧತಿಯಿಂದಾಗಿ ಕೆಲವು ಆಡಳಿತ ವರ್ಗದ ಬಾಲಬಡುಕ ಸಂಘಟನೆಗಳ ಪ್ರಾತಿನಿಧ್ಯ ಇಲ್ಲವಾಗಿ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಕಾರ್ಮಿಕರ ಮನ್ನಣೆ ಪಡೆದ ಸಂಘಕ್ಕೆ ಸಾಧ್ಯ.

ಕಾರ್ಮಿಕರಿಗೆ ದೊರೆತಿರುವ ಅನುಕೂಲತೆಗಳೆಲ್ಲ (ಅಲೋನ್ಸಗಳನ್ನು ಬಿಟ್ಟು) ಟೆಂಪರರಿ ಕೆಲಸಗಾರರಿಗೂ ದೊರೆತಿವೆ. ಕ್ಯಾಂಟೀನಿನಲ್ಲಿ ಸದ್ಯದಲ್ಲೇ ಕಾಂಟ್ರಾಕ್ಟ್ ಪದ್ಧತಿ ನಿಲ್ಲಿಸುವದಾಗಿ ಆಡಳಿತ ವರ್ಗ ಒಪ್ಪಿಕೊಂಡಿದೆ.

ದೀರ್ಘಕಾಲದ ವಿರೋಚಿತ ಹೋರಾಟದ ನಂತರ ಈ ಸೌಲಭ್ಯಗಳು ಕಾರ್ಮಿಕರಿಗೆ ದೊರೆತಿದ್ದು, ಕಾರ್ಮಿಕರನ್ನ ಪ್ರತಿನಿಧಿಸದೇ ಇರುವ ಸಂಘಗಳು ಅಸ್ತಿತ್ವದಲ್ಲಿದ್ದು ಇನ್ನೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ತೊಂದರೆಯಾಯಿತು ಎಂಬುದನ್ನು ಇಂಡಾಲ್ ಕಾರ್ಮಿಕರು ಮರೆಯಕೂಡದು.

ಈ ಒಪ್ಪಂದಕ್ಕೆ ಇಂಡಾಲ್ ವರ್ಕರ್ಸ್ ಯೂನಿಯನ್ ಪರವಾಗಿ ಸಂಘದ ಅಧ್ಯಕ್ಷ ಕಾಂ. ಆರ್. ಜಿ. ಸ್ಥಳೇಕರ್, ಪ್ರಧಾನಕಾರ್ಯದರ್ಶಿ ಕಾಂ. ಯಾಹ್ಯಾ ಮಂತ್ರಿತರರು ಅಂಕಿತ ಹಾಕಿದ್ದಾರೆ. ಮಾತುಕತೆಯ ಸಂದರ್ಭದಲ್ಲಿ ಸಿ.ಐ.ಟಿ.ಯು.ವಿನ ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾಯರು ಹಾಜರಿದ್ದು ಮಾರ್ಗದರ್ಶನ ನೀಡಿದರು.

●

ಆಪಾದಿತರ ಬಿಡುಗಡೆ

ಚಿಂತಾಮಣಿ ತಾಲ್ಲೂಕು ಬೈರಬಂಡಾ ಗ್ರಾಮದಲ್ಲಿ ಸಂಭವಿಸಿದ ನಾಡುಬಾಂಬ್ ಪ್ರಕರಣದಲ್ಲಿ ಆಪಾದಿತರಾಗಿದ್ದ ಕಾಂ. ಜಿ. ವಿ. ಅಶ್ವತ್ಥನಾರಾಯಣರೆಡ್ಡಿ ಮತ್ತು 22 ಜನರ ಮೇಲಿರುವ ಮೊಕದ್ದಮೆಯನ್ನು ಹೈಕೋರ್ಟ್ ವಜಾ ಮಾಡಿದೆ.

●

ಆಳುವ ಪಕ್ಷದ ಏಜಂಟರು

ಕೊಡಗು ಜಿಲ್ಲೆಯ ತೋಟ ಕೆಲಸಗಾರರು ಕಾಂಗ್ರೆಸ್ ಐ.ಎನ್.ಟಿ.ಯು.ಸಿ.ಯ ಮಾಲೀಕರ ಪರವಾದ ಧೋರಣೆಯ ವಿರುದ್ಧ ಬೇಸತ್ತು ಹೆಚ್ಚುಹೆಚ್ಚು ಸಂಖ್ಯೆಯಲ್ಲಿ ಸಿ.ಐ.ಟಿ.ಯು. ಸಂಘಟನೆಗೆ ಸೇರುತ್ತಿದ್ದಾರೆ. ಸಿದ್ದಾಪುರ, ಚೆಟ್ಟಳ್ಳಿ, ಸುಂಟಿಕೊಪ್ಪ ಏರಿಯಾಗಳಲ್ಲಿರುವ ಕಾಫೀ ಕೈಗಾರಿಕಾ ತೋಟ ಕೇಂದ್ರಗಳಲ್ಲಿ ದುಡಿಯುವವರು ಈ ದಿಶೆಯಲ್ಲಿ ಮುಂದಾಗಿದ್ದಾರೆ.

ಸಿದ್ದಾಪುರದಲ್ಲಿ ಸಿ.ಐ.ಟಿ.ಯು., ಡಿ.ವೈ.ಓ. ಮುಂತಾದ ಸಂಘಟನೆಗಳು ಬಲಿಷ್ಠವಾಗಹತ್ತಿರುವುದು ಸಹಜವಾಗಿಯೇ ಕೆಲವರಿಗೆ ಹಿಡಿಸದಾಗಿದೆ. ಈ ಸಂಘಟನೆಗಳಲ್ಲಿ ದುಡಿಯುತ್ತಿರುವ ಸಕ್ರಿಯ ಕಾರ್ಯಕರ್ತರ ಮೇಲೆ ಪೋಲೀಸರು ಸುಳ್ಳು ಮೊಕದ್ದಮೆ ದಾಖಲು ಮಾಡುತ್ತಾ ತೊಂದರೆಕೊಡುತ್ತಿದ್ದಾರೆ. 13-1-81 ರಂದು ಸಿ.ಐ.ಟಿ.ಯು.ವಿನ ಜಿಲ್ಲಾ ಸಹಕಾರ್ಯದರ್ಶಿಗಳಾದ ಕಾಂ. ಕುಟ್ಟಪ್ಪನ್ ಮತ್ತು ಕಾಂ. ದಿವಾಕರನ್‌ರನ್ನು ಸಿದ್ದಾಪುರ ಪೋಲೀಸ್ ಸ್ಟೇಷನ್‌ಗೆ ಎಳೆದೊಯ್ದು ಬೆದರಿಕೆ ಹಾಕಿದ್ದಾರೆ. ಮರುದಿನ (14-1-81) ಸಂಜೆ ಪೋಲೀಸರ ವರ್ತನೆಯನ್ನು ಖಂಡಿಸಿ ಸಿದ್ದಾಪುರದಲ್ಲಿ ಕಾರ್ಮಿಕರು, ಯುವಕರು ಪ್ರತಿಭಟನೆ ನಡೆಸಿದರು.

ಈ ಪ್ರತಿಭಟನೆ ನೋಡಿದ ಮೇಲೂ ಸುಮ್ಮನಿರದೇ 15-1-81ರಂದು 24 ರೈತಕಾರ್ಮಿಕರನ್ನು ಬಂಧಿಸಿ ಅವರ ಮೇಲೆ ಸುಳ್ಳು ಮೊಕದ್ದಮೆ ಹಾಕಿದ್ದಾರೆ. ಬಂಧನಪತ್ರ ಮುಂದುವರೆದಿದ್ದು ಈ ವರೆಗೆ 35 ರೈತ ಕಾರ್ಮಿಕರನ್ನು ಬಂಧಿಸಲಾಗಿದೆ; ಕಾರ್ಯಕರ್ತರ ಮನೆಮನೆಗೆ ನುಗ್ಗಿ ಬೆದರಿಸಲಾಗುತ್ತಿದೆ.

ಪೋಲೀಸರು ತಮ್ಮ ಧೋರಣೆ ಬದಲಿಸಿ ನಿರಪರಾಧಿಗಳಿಗೆ ತೊಂದರೆ ಕೊಡುವುದನ್ನು ನಿಲ್ಲಿಸದಿದ್ದರೆ ತೀವ್ರ ಚಳುವಳಿ ಹೂಡಬೇಕಾದೀತೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಎಚ್ಚರಿಕೆಯನ್ನಿತ್ತಿದೆ.

○

ಬಸ್ಸುದರ ಏರಿಕೆ ಪ್ರತಿಭಟಿಸಿದ ಜನರಿಗೆ ಲಾಠೀಚಾರ್ಜು

ಶಿಡ್ಲಘಟ್ಟ ತಾಲ್ಲೂಕದ ಗಂಜಿಗುಂಟೆ ಹಾಗೂ ಸುತ್ತಮುತ್ತಲಿನ ಗ್ರಾಮದ ವಾಸಿಗಳು ಆ ವಿಭಾಗದಲ್ಲಿ ಓಡಾಡುವ ಖಾಸಗಿ ಬಸ್‌ಗಳ ದರ ಏರಿಸಿರುವುದರ ವಿರುದ್ಧ ಪ್ರತಿಭಟಿಸಿ 23-1-81ರಂದು ಬಸ್ಸುಗಳನ್ನು ನಿಲ್ಲಿಸಿದ್ದರು. ಈ ಖಾಸಗೀ ಬಸ್ಸುಗಳ ಮಾಲೀಕರು ಮತ್ತು ಗ್ರಾಮಸ್ಥರ ನಡುವೆ ಬಸ್‌ದರ ಇಳಿಸುವ ಬಗ್ಗೆ ಮಾತುಕತೆ ನಡೆಯುತ್ತಿರುವಾಗ, ಚಿಂತಾಮಣಿಯಿಂದ 'ಶಿವಪೂಜೆಯಲ್ಲಿ ಕರಡಿ ಬಂದಂತೆ' ರಿಸರ್ವ್ ಪೋಲೀಸರು ಧಾವಿಸಿ ಪೂರ್ವಾಪರ ವಿಚಾರಿಸದೇ ಲಾಠೀಚಾರ್ಜುಮಾಡಿ ಪೌರುಷ ತೋರಿಸಿದ್ದಾರೆ. ಪೋಲೀಸರ ನಡವಳಿಕೆಯಿಂದ ಗ್ರಾಮಸ್ಥರು ಕ್ರುದ್ಧರಾಗಿ ಪರಿಸ್ಥಿತಿ ವಿಷಮಿಸುವ ಹಂತ ತಲುಪಿದಾಗ ಬಸ್ಸುಗಳ ಮಾಲೀಕರು ನಾಗರಿಕರನ್ನು ಸಮಾಧಾನಪಡಿಸಿ ಬಸ್ಸ್ ಪ್ರಯಾಣದರ ಇಳಿಸಲು ಒಪ್ಪಿದ್ದಾರೆ. ಹಾಗೂ ಬಸ್ಸು ಪ್ರಯಾಣ ಪುನರಾರಂಭವಾಗಿದೆ.

○

ಜಾಥಾ ಯಶಸ್ವಿಗೊಳಿಸಲು ದ. ಕ. ಜಿಲ್ಲಾ ರೈತಸಂಘದ ಕರೆ

22-1-81ರಂದು ಮಂಗಳೂರಿನಲ್ಲಿ ದ. ಕ. ಜಿಲ್ಲಾ ರೈತಸಂಘದ ಸಭೆಯು ಸಂಘದ ಅಧ್ಯಕ್ಷ ಕಾಂ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಜರುಗಿತು. 5-2-81ರಂದು ಬೆಂಗಳೂರಿಗೆ ತಲುಪಿ ಅಲ್ಲಿ ನಡೆಯಲಿರುವ ಬೃಹತ್ ಮತಪ್ರದರ್ಶನದಲ್ಲಿ ಜಿಲ್ಲೆಯಿಂದ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಯತ್ನಿಸಲು ನಿರ್ಧರಿಸಲಾಯಿತು.

ಜಿಲ್ಲಾ ರೈತಸಂಘದ ವತಿಯಿಂದ ನಡೆದ ಚಳುವಳಿ ಹಾಗೂ ಸಂಘಟನಾತ್ಮಕ ಚಟುವಟಿಕೆಯ ಬಗ್ಗೆ ಕಾರ್ಯದರ್ಶಿ ಕಾಂ. ಜನಾರ್ಧನ ನಾಯಕ್‌ರು ವರದಿಯನ್ನಿತ್ತರು. ವಿವಿಧ ತಾಲ್ಲೂಕುಗಳ ಸಂಘಟನೆಯ ಬಗ್ಗೆ ಕಾಂ. ಕೆ. ವಿ. ರಾವ್, ಲಕ್ಷ್ಮಣ ಗೌಡ, ಬಿ. ನಾರಾಯಣ, ಟಿ.ಎಸ್. ಕೋಟ್ಯಾನ್ ಮತ್ತು ಕಾಂ. ಶಿವರಾಂ ಶೆಟ್ಟಿ, ರುಕ್ಮಯ್ಯಪೂಜಾರಿ ಮೊದಲಾದವರು ಮಾತನಾಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಕಾಂ. ಓ. ರಾಮಚಂದ್ರರಾವ್ ಮತ್ತು ಕಾಂ. ಕೆ. ಆರ್. ಶ್ರೀಯಾನ್ ಮಾತನಾಡಿ ರಾಜ್ಯದಲ್ಲಿ ಬೆಳೆಯುತ್ತಿರುವ ರೈತ ಚಳುವಳಿ ಹಾಗೂ ಫೆಬ್ರವರಿ 5 ರಂದು ನಡೆಯಲಿರುವ ರೈತಕಾರ್ಮಿಕರ ಬೃಹತ್ ಮತಪ್ರದರ್ಶನದ ಮಹತ್ವವನ್ನು ವಿವರಿಸಿದರು.

ಸಭೆಯಲ್ಲಿ, ರಾಜ್ಯಸರ್ಕಾರ ಬಸ್ ದರ ಏರಿಸಿರುವುದನ್ನು, ಬೆಂಗಳೂರು ಮತ್ತು ಚಿಂತಾಮಣಿಗಳಲ್ಲಿ ನಡೆದಿರುವ ಪೋಲೀಸ್ ಗೋಲಿಬಾರ್ ಮಾಡಿರುವುದನ್ನು, ಸರ್ಕಾರದ ಕಡ್ಡಾಯ ಲೆವಿ ವಸೂಲಿ ಧೋರಣೆಯನ್ನು ಉಗ್ರವಾಗಿ ಖಂಡಿಸಲಾಯಿತಲ್ಲದೇ ಗೋಲಿಬಾರ್‌ನಲ್ಲಿ ಮೃತರಾದ ಕುಟುಂಬಗಳಿಗೆ ಯೋಗ್ಯ ಪರಿಹಾರ ನೀಡಿ ಗೋಲಿಬಾರಿನ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕೊನೆಯಲ್ಲಿ ಕಾಂ. ಜನಾರ್ಧನ ನಾಯಕ್‌ರು ಧನ್ಯವಾದಗಳನ್ನರ್ಪಿಸಿದರು.

●

ವಿದ್ಯಾರ್ಥಿಗಳ ಕರೆಗೆ ದೊಡ್ಡಬಳ್ಳಾಪುರ ಯಶಸ್ವಿ ಬಂದ್

ಚಿಂತಾಮಣಿಯ ಮತ್ತು ಬೆಂಗಳೂರಿನಲ್ಲಿ ಗೋಲಿಬಾರ್‌ಮಾಡಿ 6 ಜನರನ್ನು ಬಲಿತೆಗೆದುಕೊಂಡ ಕೃತ್ಯವನ್ನು ಪ್ರತಿಭಟಿಸಿ ದೊಡ್ಡಬಳ್ಳಾಪುರ ಬಂದ್ ಆಚರಿಸಲಾಯಿತು. ಸ್ಥಳೀಯ ಕೊಂಗಾಡಿಪ್ಪ ಕಾಲೇಜು ಮತ್ತು ಸರ್ಕಾರಿ ಜ್ಯೂನಿಯರ್ ಕಾಲೇಜು ಹಾಗೂ ಹೈಸ್ಕೂಲಿಗೆ ಸೇರಿದ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಬಂದ್ ಯಶಸ್ವಿಗೆ ಎಸ್.ಎಫ್.ಐ. ಸಂಪೂರ್ಣ ಬೆಂಬಲ ನೀಡಿತ್ತು.

ವಿದ್ಯಾರ್ಥಿಗಳನ್ನುದ್ದೇಶಿಸಿ ವಿದ್ಯಾರ್ಥಿ ಮುಖಂಡರಾದ ಎಂ. ಆಂಜನಪ್ಪ, ವೆಂಕಟಸ್ವಾಮಿ ಹಾಗೂ ಡಿ.ವೈ.ಓ.ನ ಹಂಸ್ಕೂರ್ ಸತ್ಯಕುಮಾರ್ ಮೊದಲಾದವರು ಮಾತನಾಡಿದರು. ಗೋಲಿಬಾರ್‌ನಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಹಾಗೂ ತಹಶೀಲ್ದಾರರಿಗೆ ಮನವಿ ಅರ್ಪಿಸಿ ಮೃತರ ಕುಟುಂಬಕ್ಕೆ ಪರಿಹಾರ ದೊರೆಯಬೇಕು.ಈ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

○

ಹೊಲಿಗೆ ಉತ್ಪಾದನಾ ಕೇಂದ್ರದ ಮಹಿಳೆಯರ ಮನವಿ

ಕರ್ನಾಟಕ ರಾಜ್ಯದಲ್ಲಿ ಮಹಿಳೆಯರಿಗೆ ಉದ್ಯೋಗ ಒದಗಿಸುವದಕ್ಯೋಸ್ಕರ ಹಾಗೂ ಮಹಿಳೆಯರಿಗೆ ಉತ್ಪಾದನಾ ಕ್ಷೇತ್ರದಲ್ಲಿ ಭಾಗವಹಿಸುವಂತೆ ಮಾಡುವದಕ್ಯೋಸ್ಕರ ಕೆಲವು ಸ್ಥಳಗಳಲ್ಲಿ ಮಹಿಳೆಯರಿಗಾಗಿ ಹೊಲಿಗೆ ಉತ್ಪಾದನಾ ಕೇಂದ್ರಗಳನ್ನು ತೆರೆಯಲಾಗಿದೆ. ಈ ಹೊಲಿಗೆ ಉತ್ಪಾದನಾ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ತಿಂಗಳಿಗೆ ರೂ. 80 ರಿಂದ ರೂ. 150 ರವರೆಗೆ ಮಾತ್ರ ಸಂಬಳ ಸಿಗುತ್ತದೆ. ಈ ಮಹಿಳೆಯರ ಸಂಘಟನೆಯೂ ಗುಲ್ಬರ್ಗಾದಲ್ಲಿ ಪ್ರಾರಂಭವಾಗಿದೆ. ತಮ್ಮನ್ನು ಖಾಯಂ ನೌಕರರೆಂದು, ಈ ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಕನಿಷ್ಠ ತಿಂಗಳಿಗೆ ರೂ. 450 ಸಂಬಳ ದೊರೆಯಬೇಕು. ಎಲ್ಲ ಮಹಿಳೆಯರಿಗೂ ನಿವೃತ್ತಿ ವೇತನ ಸಿಗುವಂತಾಗಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ತಮ್ಮ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಹೊಲಿಗೆ ಉತ್ಪಾದನಾ ಕೇಂದ್ರದ ಮಹಿಳೆಯರ ಪರವಾಗಿ ಶ್ರೀಮತಿ ಪ್ರಮಿಳಾಬಾಯಿ ವಿನಂತಿಸಿಕೊಂಡಿದ್ದಾರೆ.

○

ವಿದ್ಯಾಭ್ಯಾಸದ ವ್ಯಾಪಾರೀಕರಣ ತಡೆಗಟ್ಟಲು ವಿದ್ಯಾರ್ಥಿ ಸಮುದಾಯ ಸಿಡಿದೇಳಲಿ

ಎಸ್. ಆರ್. ಆರಾಧ್ಯ

ಕರ್ನಾಟಕ ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಕಿರಿಯ ವೈದ್ಯರುಗಳು ಕಳೆದ ಎರಡು ತಿಂಗಳಿನಿಂದ ಹೋರಾಟದ ಕಣದಲ್ಲಿದ್ದಾರೆ. ಕರ್ನಾಟಕ ರಾಜ್ಯಸರ್ಕಾರವು 80-81ನೇ ಸಾಲಿನಲ್ಲಿ ಮೂರು ನೂತನ ಮೆಡಿಕಲ್ ಕಾಲೇಜುಗಳ ಪ್ರಾರಂಭಕ್ಕೆ ನೀಡಿದ ಪರವಾನಗಿ ಶೈಕ್ಷಣಿಕ ರಂಗದಲ್ಲಿ ತೀವ್ರ ವಾದ ವಿವಾದವನ್ನುಂಟುಮಾಡಿತು. ನವೆಂಬರ್ 26ರಂದು ವೈದ್ಯ ವಿದ್ಯಾರ್ಥಿಗಳ ಸಂಘ ಏರ್ಪಡಿಸಿದ ವಿಚಾರ ಸಂಕಿರಣ ಇಂದಿನ ಸಂಘರ್ಷಕ್ಕೆ ನಾಂದಿ ಹಾಡಿತು. ನವೆಂಬರ್ 28 ರಂದು ವೈದ್ಯ ವಿದ್ಯಾರ್ಥಿಗಳು ಮೆರವಣಿಗೆಯ ಮೂಲಕ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಮನವಿಯೊಂದನ್ನು ಸಲ್ಲಿಸಿದರು. ಡಿಸೆಂಬರ್ 8ರಿಂದ ರಾಜ್ಯದ ಎಲ್ಲ ಮೆಡಿಕಲ್ ಕಾಲೇಜುಗಳ ವಿದ್ಯಾರ್ಥಿಗಳು ತರಗತಿಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಡಿಸೆಂಬರ್ 22ರಿಂದ ಪಿಕೆಟಿಂಗ್ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಬೆಂಗಳೂರಿನಲ್ಲಿ ಮಾಮೂಲಿಯಾಗಿ ಪೋಲೀಸ್ ಪಾಳೆಯಗಾರರ ನಿಷೇಧಾಜ್ಞೆ ಜಾರಿಯಲ್ಲಿದ್ದುದರಿಂದ ಪಿಕೆಟಿಂಗ್ ಬೆಂಗಳೂರಿನಲ್ಲಿ ಮಾತ್ರ ನಡೆಯಲಿಲ್ಲ. ಡಿಸೆಂಬರ್ 25ರಂದು ಮುಖ್ಯಮಂತ್ರಿಗಳ ಸಂಗಡ ನಡೆಸಿದ ಮಾತುಕತೆ ಪ್ರಯೋಜನಕ್ಕೆ ಬರಲಿಲ್ಲ. ಡಿಸೆಂಬರ್ 27ರಂದು ಬೆಂಗಳೂರಿನಲ್ಲಿ 6 ವಿದ್ಯಾರ್ಥಿನಿಯರೂ ಸೇರಿದಂತೆ 58 ಮಂದಿ ವೈದ್ಯ ವಿದ್ಯಾರ್ಥಿಗಳು ಬಂಧನಕ್ಕೊಳಗಾದರು. ದಾವಣಗೆರೆಯಲ್ಲಿ 87 ಮಂದಿ ಬಂಧನಕ್ಕೊಳಗಾದರು. ಇದರಲ್ಲಿ 24 ವಿದ್ಯಾರ್ಥಿನಿಯರೂ ಸೇರಿದ್ದಾರೆ. ಸರ್ಕಾರದ ಕಣ್ಣೊರೆಸುವ ಕ್ರಮವಾಗಿ ಜನವರಿ 8ರಂದು ನೇಮಿಸಿದ 'ಆಯೋಗ'ದಿಂದ ವಿದ್ಯಾರ್ಥಿಗಳನ್ನು ತೃಪ್ತಿಪಡಿಸಲಾಗಲಿಲ್ಲ. ಜನವರಿ 21ರಂದು ಹುಬ್ಬಳ್ಳಿಯಲ್ಲಿ 48 ವಿದ್ಯಾರ್ಥಿನಿಯರೂ ಸೇರಿದಂತೆ 238 ಮಂದಿ ಬಂಧನಕ್ಕೊಳಗಾದರು. ಜನವರಿ 15ರಂದು ಬೆಳಗಾವಿಯಲ್ಲಿ 21 ಮಂದಿ ವೈದ್ಯರನ್ನು ಬಂಧಿಸಲಾಯಿತು. ಜನವರಿ 15 ಮತ್ತು 16ರಂದು ಬೆಂಗಳೂರಿನಲ್ಲಿ ಪುನಃ 6 ಮಂದಿ ಸ್ವ ಇಚ್ಛೆಯಿಂದ ಬಂಧನಕ್ಕೊಳಗಾದರು. ರಾಜ್ಯದ ನಾನಾ ಕಡೆ ವೈದ್ಯ ವಿದ್ಯಾರ್ಥಿಗಳು ಬೃಹತ್ ಪ್ರದರ್ಶನಗಳನ್ನು ನಡೆಸಿದ್ದಾರೆ. ಈ ಮಧ್ಯೆ ಜನವರಿ 12ರಂದು ಸಮಾಜಘಾತುಕ ಶಕ್ತಿಗಳ ಕುತಂತ್ರದಿಂದ ಬೆಂಗಳೂರು ಮೆಡಿಕಲ್ ಕಾಲೇಜಿನ ವಾಹನವೊಂದಕ್ಕೆ ಬೆಂಕಿ ಇಟ್ಟ ಅಹಿತಕರ ಘಟನೆಯೂ ನಡೆದು ಹೋಯಿತು. ವೈದ್ಯ ವಿದ್ಯಾರ್ಥಿಗಳು ಈಗ ಪರೀಕ್ಷೆಗಳನ್ನೂ ಬಹಿಷ್ಕರಿಸಿದ್ದು ಹೋರಾಟವು ಮತ್ತಷ್ಟು ತೀವ್ರ ಸ್ವರೂಪ ಪಡೆಯುತ್ತಿದೆ. ಜನವರಿ 23ರಂದು ರಾಜ್ಯದಾದ್ಯಂತ 'ಮೆಡಿಕಲ್ ಬಂದ್' ಕರೆ ಯಶಸ್ವಿಯಾಯಿತು. ಸರ್ಕಾರದ ತಪ್ಪು ಧೋರಣೆಯ ವಿರುದ್ಧ ವೈದ್ಯ ವಿದ್ಯಾರ್ಥಿಗಳು ಒಂದೆಡೆ ಹೋರಾಟ ನಡೆಸುತ್ತಿದ್ದರೆ ಇನ್ನೊಂದೆಡೆ ಸರ್ಕಾರದ ನಿಲುವನ್ನು ಸಮರ್ಥಿಸಲು ಶಾಲಾ-ಕಾಲೇಜುಗಳ ಮುಗ್ಧ ವಿದ್ಯಾರ್ಥಿಗಳನ್ನು ಸಂಕುಚಿತ ಭಾವನೆಗಳ ಮೂಲಕ ಪ್ರಚೋದಿಸಿ ಪ್ರತಿರೋಧ ಹೋರಾಟವೊಂದನ್ನು ಬೆಳೆಸುವ ಕುತಂತ್ರ ನಡೆಯುತ್ತಿದೆ. ಪರ-ವಿರೋಧಿ ಪ್ರದರ್ಶನಗಳು ಸಾಮಾನ್ಯ ವಿದ್ಯಾರ್ಥಿಗಳಲ್ಲಿ ಮತ್ತು ಜನರಲ್ಲಿ ನಾನಾ ರೀತಿಯ ಅಭಿಪ್ರಾಯ, ಕಲ್ಪನೆಗಳಿಗೆಡೆಮಾಡಿದೆ. ಹಾಗಾದರೆ ವಾಸ್ತವಿಕತೆಯೇನು ?

ಶಿಕ್ಷಣ ಇಂದು ಒಂದು ಮಾರುಕಟ್ಟೆಯ ಸರುಕಾಗಿದೆ ಹಣವಂತರಿಗೇ ಉನ್ನತ ಶಿಕ್ಷಣ ಲಭ್ಯ. ಬಡ ಕುಟುಂಬಗಳವರಿಗೆ ಗುಮಾಸ್ತ ಶಿಕ್ಷಣ ಮಾತ್ರ ಲಭ್ಯ. ಕಡುಬಡವರಿಗೆ ಅಕ್ಷರ ಗಂಧವೂ ಇಲ್ಲ. ಇಂಜಿನಿಯರಿಂಗ್, ಮೆಡಿಕಲ್ ನಂತಹ ವೃತ್ತಿಪರ ಕಾಲೇಜುಗಳಲ್ಲಿ ಸೀಟುಗಳ ಹರಾಜು. ಸಾವಿರಗಟ್ಟಲೆ, ಲಕ್ಷಗಟ್ಟಲೆ ಹಣ ಸುರಿಯಲು ತಾಕತ್ತಿದ್ದವರಿಗೇ ಅವಕಾಶ. ಮೆಡಿಕಲ್ ಸೀಟುಗಳ ಸದ್ಯದ ಮಾರುಕಟ್ಟೆಯ ಬೆಲೆ ತಲಾ ಒಂದು ಲಕ್ಷ 60 ಸಾವಿರ ರೂಪಾಯಿಗಳು. ಇದು ಸರ್ಕಾರ ನಿಗಧಿಪಡಿಸಿರುವ ಅಧಿಕೃತ ದರ. ಕಾಳಸಂತೆಯಲ್ಲಿ ಇದರ ಬೆಲೆ ಇನ್ನೂ ದುಬಾರಿ. ಕೈಗಾರಿಕೋದ್ಯಮಿಗಳು ಮೆಡಿಕಲ್ ಕಾಲೇಜುಗಳ ವ್ಯವಹಾರ ಬಹಳ ಲಾಭಕರವೆಂದು ಮನಗಂಡು ಈ ವ್ಯಾಪಾರ ರಂಗಕ್ಕೆ ಧುಮುಕಿದ್ದಾರೆ. ರಾಜಕಾರಣಿಗಳಿಗೆ ತಮ್ಮ ಪ್ರಭಾವ ಬೆಳೆಸಿಕೊಳ್ಳಲು ಇದು ಉತ್ತಮ ಅವಕಾಶ. ಮತೀಯ ಸಂಸ್ಥೆಗಳಿಗೆ ತಮ್ಮ ವಿಷವೃತ್ತವನ್ನು ನಿರ್ಮಿಸಿ ಜಾತೀಬೀಜ ಬಿತ್ತಲು ಸದವಕಾಶ. ಅದಕ್ಕಾಗಿಯೇ ಮೆಡಿಕಲ್ ಕಾಲೇಜುಗಳ ಪ್ರಾರಂಭಕ್ಕೆ ಇಷ್ಟೊಂದು ಪೈಪೋಟಿ. ಸರ್ಕಾರವೂ ಈ ದಲ್ಲಾಲಿಗಳಿಗೆ ಧಾರಾಳವಾಗಿ ಲೈಸೆನ್ಸ್ ನೀಡುತ್ತಿದೆ. ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಲು ಅಗತ್ಯ ಸೌಲಭ್ಯಗಳಿರಬೇಕು, ಶೇ. 65ರಷ್ಟು ಸೀಟುಗಳನ್ನಾದರೂ ಅರ್ಹತೆ ಆಧಾರದಲ್ಲಿ ನೀಡಬೇಕು, ವಿಶ್ವವಿದ್ಯಾಲಯ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ಗಳ ಒಪ್ಪಿಗೆ ಪಡೆಯಬೇಕು ಮುಂತಾದ ನೀತಿ ನಿಯಮಗಳಿಗೆ ತಿಲಾಂಜಲಿ. ಒಂದೆಡೆ ಅರ್ಹತೆ, ಇನ್ನೊಂದೆಡೆ ಕ್ಯಾಪಿಟೇಶನ್ ಹಣದ ಗಂಟನ್ನು ಇಟ್ಟು ತೂಕಮಾಡುವುದು ಸರ್ಕಾರದ 'ನ್ಯಾಯ ನೀತಿ'. ಅರ್ಹತೆಯ ಮಟ್ಟವನ್ನು ಮೇಲೆ ಮೇಲೆ ಏರಿಸಲಾಗುತ್ತಿದ್ದು ಸಾಮಾನ್ಯ ವಿದ್ಯಾರ್ಥಿಗಳು ಇದನ್ನು ಮುಟ್ಟುವುದು ನರಿ ದ್ರಾಕ್ಷಿ ಚಪ್ಪರವನ್ನು ಮುಟ್ಟಲು ನೆಗೆಯುವಂತಾಗಿದೆ. ಬೆಲೆಏರಿಕೆಗನುಗುಣವಾಗಿ ಕ್ಯಾಪಿಟೇಶನ್ ಫೀ ಸಹ ಏರುತ್ತಿದೆ. ಕಾಳಸಂತೆಯ ಮಾರಾಟ ಹೆಚ್ಚಾಗುತ್ತಿದೆ. ಅಷ್ಟಲ್ಲದೆ ಆರ್ಥಿಕ ಮುಗ್ಗಟ್ಟು ತೀವ್ರವಾಗುತ್ತಿರುವುದರಿಂದ ಶೇ. 90ರಷ್ಟು ಸೀಟುಗಳೆಲ್ಲವನ್ನೂ ಕ್ಯಾಪಿಟೇಶನ್‌ಗೆ ಮಾರಲು ಸರ್ಕಾರ ಸಮಯೋಚಿತ ನಿರ್ಧಾರ ಮಾಡಿದೆ. ವಿದೇಶಿ ವಿನಿಮಯ ಗಳಿಸಲು ಇದೊಂದು ಉತ್ತಮ ಮಾರ್ಗವೆಂದು 20 ಸಾವಿರ ಅಮೆರಿಕನ್ ಡಾಲರುಗಳನ್ನು ನೀಡುವವರಿಗೆ ಪ್ರಾತಿನಿಧ್ಯ ನೀಡುವುದೂ ಸರ್ಕಾರದ ಜಾಣತನದ ಕ್ರಮವಾಗಿದೆ. ಹೇರಳ ಹಣ ಸುರಿಯುವ ಕನ್ನಡೇತರರಿಗೆ ಮೆಡಿಕಲ್ ಸೀಟುಗಳನ್ನು ಮಾರುವಾಗ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ 'ಮಣ್ಣಿನ ಮಕ್ಕಳ ವಾದ' ಮರೆತು ಹೋದಂತಿದೆ. ಇದು ರಾಜತಾಂತ್ರಿಕತೆಯಿರಬಹುದು. ಮುಖ್ಯಮಂತ್ರಿಗಳ ಆರಾಧ್ಯ ದೈವವಾಗಿರುವ ಶ್ರೀಮತಿ ಇಂದಿರಾದೇವಿಯವರು ಕಳೆದ ಚುನಾವಣೆಯ ಸಮಯದಲ್ಲಿ ಚರ್ಚಿನಲ್ಲಿ ಕ್ರಾಸ್‌ಮಾಡಿ, ಮಸೀದಿಯಲ್ಲಿ ನಮಾಜುಮಾಡಿ, ದೇವಸ್ಥಾನದಲ್ಲಿ ತುಲಾಭಾರ ಮಾಡಿಸಿಕೊಂಡು ಒಂದು ರೀತಿಯಲ್ಲಿ ತಮ್ಮ ಜಾತ್ಯಾತೀತೆಯ ಔನತ್ಯವನ್ನು ಪ್ರದರ್ಶಿಸಿದರು. ಈ ದೇವಿಯ ಪೂಜಾರಿಯೆಂದು ಹೇಳಿಕೊಂಡಿರುವ ಮಾನ್ಯ ಗುಂಡೂರಾಯರು ಪ್ರತಿ ಜಾತಿಗೊಂದು ಮೆಡಿಕಲ್ ಕಾಲೇಜುಗಳ ಲೈಸೆನ್ಸ್ ನೀಡಿ ಮತ್ತೊಂದು ರೀತಿಯಲ್ಲಿ ಜಾತ್ಯಾತೀತತೆಯನ್ನು ಪ್ರದರ್ಶಿಸಿದ್ದಾರೆ. ಮಠಾಧಿಪತಿಗಳು, ಚರ್ಚುಗಳು, ಮಸೀದಿಗಳು ಮೆಡಿಕಲ್ ಶಿಕ್ಷಣ ವ್ಯಾಪಾರ ರಂಗದ ಪೈಪೋಟಿಯಲ್ಲಿ ಸ್ಪರ್ಧಿಸಲು ಗುಂಡೂರಾಯರ ಗ್ರೀನ್ ಸಿಗ್ನಲ್‌ಗಾಗಿ ತುದಿಗಾಲಿನಲ್ಲಿ ನಿಂತು ಕಾಯುತ್ತಿದ್ದಾರೆ. ಗುಂಡೂರಾಯರು ಬಹಳ ಉದಾರಿಗಳು. ಮೂರು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಧಿಡೀರ್ ಲೈಸೆನ್ಸ್ ನೀಡಿದರು. 24 ಅರ್ಜಿಗಳಿದ್ದು ತಕ್ಷಣದಲ್ಲಿ 13 ಮಂದಿಗೆ ಲೈಸೆನ್ಸ್ ನೀಡುವಂತೆ ಫೈಲುಗಳ ವಿಲೇವಾರಿಯಲ್ಲಿ ಬಹಳ ನಿಪುಣರು ಯಾರಾದರೂ ಹೊಸ ಮೆಡಿಕಲ್ ಕಾಲೇಜುಗಳನ್ನು ವಿರೋಧಿಸಿದರೆ ಮತ್ತಷ್ಟು ಕಾಲೇಜುಗಳನ್ನು ಪ್ರಾರಂಭಿಸುತ್ತೇನೆಂದು ಮುಖ್ಯಮಂತ್ರಿಗಳು ತಮ್ಮ ಛಲ ಪ್ರದರ್ಶನ ಮಾಡಿದ್ದಾರೆ. ಕರ್ನಾಟಕದ ಆರು ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಹಣ ಸುಲಿಗೆ ನಡೆಯುತ್ತಿರುವುದಾಗಿ ಇದೇ ಇಂದಿರಾ ಕಂಪನಿಯ ದೆಹಲಿಯಲ್ಲಿನ ಮಂತ್ರಿವರ್ಯರು ಆಕ್ಷೇಪವೆತ್ತಿದ್ದಾರೆ. ಬೇರೆ ಯಾವ ರಾಜ್ಯದಲ್ಲೂ ಈ ರೀತಿಯ ಮಾರಾಟ ವ್ಯವಸ್ಥೆ ಇಲ್ಲ. ಖಾಸಗಿ ವಿದ್ಯಾಸಂಸ್ಥೆಗಳ ಕಪಿಮುಷ್ಠಿ ಮೆಡಿಕಲ್ ಶಿಕ್ಷಣಕ್ಕೆ ಮಾತ್ರ ಸೀಮಿತವಲ್ಲ. ಇಲ್ಲಿಯ ಪರಿಸ್ಥಿತಿ ಬಹಳ ಗಂಭೀರವಾಗಿದೆಯಷ್ಟೆ. ಇಂಜಿನಿಯರಿಂಗ್ ಶಿಕ್ಷಣದ ಮಾರುಕಟ್ಟೆಯಲ್ಲೂ ಈಗ ವ್ಯಾಪಾರ ಕುದುರುತ್ತಿದೆ. ರಾಜ್ಯದ 268 ಪ್ರಥಮ ದರ್ಜೆ ಕಾಲೇಜುಗಳಲ್ಲಿ 244 ಖಾಸಗಿ ಕಾಲೇಜುಗಳು. ಸರ್ಕಾರದ ಪಾಲಿಗೆ ಕೇವಲ 24 ಮಾತ್ರ. ಈ ಎಲ್ಲ ಖಾಸಗಿ ಶಾಲೆಗಳಲ್ಲೂ ಡೊನೇಷನ್ ಎಂಬ ಹೆಸರಿನಲ್ಲಿ ಬಡ ವಿದ್ಯಾರ್ಥಿಗಳ ಸುಲಿಗೆ ಧಾರಾಳವಾಗಿ ನಡೆಯುತ್ತಿದೆ. 50 ರಿಂದ 5ಸಾವಿರ ರೂ.ಗಳವರೆಗೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಏನಿದ್ದರೂ 10 ಸಾವಿರ ರೂಗಳ ಮೇಲೆಯೇ ಮಾತು. ಮೆಡಿಕಲ್ ಕಾಲೇಜುಗಳ ಹಾಗೆ ಇಲ್ಲಿ ಸರ್ಕಾರದ ಅಧಿಕೃತ ಪರವಾನಗಿ ಇಲ್ಲದಿದ್ದರೂ ಅನಧಿಕೃತವಾಗಿಯಾದರೂ ಅಷ್ಟೇ ಕಡ್ಡಾಯವಾಗಿ ವಸೂಲಿ ಕೆಲಸ ನಡೆಯುತ್ತಿದೆ. ಮಾತ್ರವಲ್ಲ, ಸರ್ಕಾರಿ ಕಾಲೇಜಿನ ಎರಡು ಪಟ್ಟು ಶಿಕ್ಷಣ ಶುಲ್ಕ ವಸೂಲಿ ಮಾಡಲು ಸರ್ಕಾರವೇ ಅನುಮತಿ ನೀಡಿದೆ. ಇನ್ನು ಮೆಡಿಕಲ್ ಕಾಲೇಜುಗಳ ವಿಷಯಕ್ಕೆ ಬಂದರೆ ಸರ್ಕಾರಿ ಕಾಲೇಜಿನಲ್ಲಿ ವರ್ಷಕ್ಕೆ ಸುಮಾರು 600 ರೂ.ಶಿಕ್ಷಣ ಶುಲ್ಕವಿದ್ದರೆ ಖಾಸಗಿ ಮಾರುಕಟ್ಟೆಯಲ್ಲಿ ವರ್ಷಕ್ಕೆ 6000ರೂಗಳಷ್ಟು ಸುಂಕ. ಸುಂಕಕಟ್ಟಲು ತಾಕತ್ತಿಲ್ಲದವನಿಗೆ ಮಾರುಕಟ್ಟೆಗೆ ಪ್ರವೇಶವಿಲ್ಲ. ಇಷ್ಟಾದರೆ ಸಾಕೇ? ಬಡಜನರ ರಕ್ತ ಹೀರಿ ಕೂಡಿಸಿಟ್ಟ ಸರ್ಕಾರದ ಬೊಕ್ಕಸದ ಹಣದಿಂದ ಈ ಖಾಸಗಿ ವಿದ್ಯಾಸಂಸ್ಥೆಗಳಿಗೆ ಶೇ. 93 ರಷ್ಟು ಗ್ರಾಂಟ್ ನೀಡಿ ಅಭಯ ರಕ್ಷೆ ನೀಡಲಾಗಿದೆ. ಹೇಗಿದ್ದರೂ ಏಕೆ ಈ ಸಂಸ್ಥೆಗಳನ್ನು ರಾಷ್ಟ್ರೀಕರಿಸಬಾರದು? ಛೆ! ಅದೊಂದು ಪ್ರಜಾಪ್ರಭುತ್ವ ಕ್ರಮವೇ? ತಾಕತ್ತಿದ್ದಷ್ಟು ಕೊಳ್ಳೆಹೊಡೆಯುವ ಸ್ವಾತಂತ್ರ್ಯಕ್ಕೆ ಮತ್ತು ಜಾತೀಯ ಬೀಜ ಬಿತ್ತುವ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಂತಾಗುವುದಿಲ್ಲವೇ? ಸರ್ಕಾರವೇ ನೇಮಿಸಿದ ಡಾ॥ ರಾಜ್ ಆಯೋಗವು ತನ್ನ ವರದಿಯಲ್ಲಿ ಕ್ಯಾಪಿಟೇಷನ್, ಡೊನೇಷನ್ ಆಧಾರದಲ್ಲಿ ಇನ್ನು ಮುಂದೆ ಯಾವುದೇ ಶಾಲಾ-ಕಾಲೇಜುಗಳ ಪ್ರಾರಂಭಕ್ಕೆ ಅನುಮತಿ ನೀಡಬಾರದೆಂದೂ, ಇನ್ನೈದು ವರ್ಷದೊಳಗೆ ಡೊನೇಷನ್, ಕ್ಯಾಪಿಟೇಷನ್ ವಸೂಲಿಯನ್ನೂ ಸಂಪೂರ್ಣ ನಿಲ್ಲಿಸಬೇಕೆಂದೂ ಒತ್ತಾಯಿಸಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತಿಳಿಸುತ್ತದೆ. ಗುಂಡೂರಾಯರು ಪ್ರಸಿದ್ಧ ಕೈಗಾರಿಕೋದ್ಯಮಿ ಎಂ. ಎಸ್. ರಾಮಯ್ಯನವರಿಗೆ ತಮ್ಮ ನೂತನ ಮೆಡಿಕಲ್ ಕಾಲೇಜಿನಲ್ಲಿ ಶೇ. 90 ಸೀಟುಗಳನ್ನು ಕ್ಯಾಪಿಟೇಶನ್‌ಫೀಗೆ ಮಾರಲು ಲೈಸೆನ್ಸ್ ನೀಡಿರುವುದನ್ನು ಗಮನಿಸಿದರೆ ಬಹುಶಃ ಡಾ॥ ರಾಜ್ ಆಯೋಗದ ಫೈಲ್ ಗುಂಡೂರಾಯರ ಫೈಲ್ ವಿಲೇವಾರಿ ಗಲಭೆಯಲ್ಲಿ ಮಿಸ್ ಆಗಿರಬಹುದೆಂದು ಕಾಣುತ್ತದೆ.ಪಾಪ! ಗುಂಡೂರಾಯರು ಕೆಲವೊಮ್ಮೆ ತಮ್ಮ ಮಾತನ್ನು ತಾವೇ ವಾಪಸ್ ನುಂಗಬೇಕಾಗುತ್ತದೆ.

ಒಬ್ಬ ವೈದ್ಯ ಪದವೀಧರರನ್ನು ತಯಾರು ಮಾಡಲು ವಿದ್ಯಾರ್ಥಿಯ ಖರ್ಚಲ್ಲದೇ ಸರ್ಕಾರಕ್ಕೆ ಸುಮಾರು 60 ಸಾವಿರ ರೂ. ವೆಚ್ಚ. ಒಂದೆಡೆ ವೈದ್ಯಕೀಯ ಸೌಲಭ್ಯವಿಲ್ಲದೆ ಸಾಮಾನ್ಯ ಜನ ನರಳುತ್ತಿದ್ದಾರೆ. ಇನ್ನೊಂದೆಡೆ ನಿರುದ್ಯೋಗಿ ವೈದ್ಯರುಗಳ ಸೈನ್ಯ ಗಣನೀಯವಾಗಿದೆ. ಇದೆಂತಹ ವೈಪರೀತ್ಯ? ವೈದ್ಯಕೀಯ ಸೌಲಭ್ಯವನ್ನು ಕೊಳ್ಳುವ ಶಕ್ತಿ ನಮ್ಮ ಜನಕ್ಕಿಲ್ಲ. ಬಹುಪಾಲು ಹಳ್ಳಿಗಳಿಗೆ ಆಸ್ಪತ್ರೆಯೆಂಬುದು ದೂರದ ಮಾತು. ಬೇರೆ ದಾರಿಯಿಲ್ಲದೆ ವೈದ್ಯರುಗಳು ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಪಾಶ್ಚಾತ್ಯ ದೇಶಗಳು ಅನವಶ್ಯಕವಾಗಿ ಬಂಡವಾಳ ಹೂಡುವುದರ ಬದಲು ಭಾರತದ ರೆಡಿಮೆಡ್ ವೈದ್ಯರುಗಳ ಸೇವೆಯನ್ನು ಕೊಂಡುಕೊಳ್ಳುತ್ತಿದ್ದಾರೆ. ಇನ್ನೂ ಹೆಚ್ಚಿನ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಿ ಹಳ್ಳಿಯ ಬಡವರಿಗೆ ವೈದ್ಯಕೀಯ ಸೇವೆ ಒದಗಿಸುವುದಾಗಿ ಗುಂಡೂರಾಯರ

[ಕಡೆಯ ಪುಟ ನೋಡಿ]

ಪೊಲಿಟ್‌ಬ್ಯೂರೊ ಕರೆ

ಜನತೆಯ ಚಳುವಳಿಗಳನ್ನು ಬಲಪಡಿಸಲು ಎಲ್ಲ ಶಕ್ತಿಗಳನ್ನೂ ಒಂದುಗೂಡಿಸಿ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಪೊಲಿಟ್‌ಬ್ಯೂರೋವು ಜನವರಿ ೧೦ ರಿಂದ ೧೨ರ ವರೆಗೆ ನವದೆಹಲಿಯಲ್ಲಿ ಸಭೆ ಸೇರಿತ್ತು. ಕಾಂ. ಜ್ಯೋತಿಬಸು ಅಧ್ಯಕ್ಷತೆ ವಹಿಸಿದ್ದರು.

ದೇಶದಾದ್ಯಂತ ಪ್ರತಿಭಟನೆ, ಪ್ರದರ್ಶನಗಳನ್ನು ನಡೆಸಿದ ಲಕ್ಷಾಂತರ ರೈತರಿಗೆ ಪಿ. ಬಿ. ಅಭಿನಂದನೆಗಳನ್ನು ಸಲ್ಲಿಸಿತು. ಸರ್ಕಾರದ ವರ್ಗನೀತಿಯ ವಿರುದ್ಧ ಅವರು ಬಂಡೆದ್ದಿದ್ದಾರೆ. ಮಧ್ಯಮವರ್ಗದ ಉದ್ಯೋಗಿಗಳು, ಕೈಗಾರಿಕಾ ಕಾರ್ಮಿಕರ ಹರಡುತ್ತಿರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಈ ರೈತರ ಹೋರಾಟವೂ ನಡೆಯುತ್ತಿದ್ದು, ಜನತೆಯ ಹೋರಾಟದ ಈ ಹೊಳೆಗಳೆರಡೂ ಒಗ್ಗಟ್ಟಾಗಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಪ್ರತಿಭಟಿಸುತ್ತಿವೆ.

ವಿಶಾಲ ಹೋರಾಟ

ತನ್ನಷ್ಟಕ್ಕೆ ತಾನೇ ಇದ್ದಕ್ಕಿದ್ದಂತೆ ಹುಟ್ಟಿಕೊಂಡರೂ ಸಹ ರೈತ ಹೋರಾಟ ಈಗ ಸಂಘಟಿತ ರೂಪ ತಳೆಯುತ್ತಿದೆ ಎಂದು ಪಿ. ಬಿ. ಗಮನಿಸಿತು. ಆರು ವಿರೋಧ ಪಕ್ಷಗಳ ಸಮನ್ವಯ ಸಮಿತಿಯ ಕಾರ್ಯವಿಧಾನದ ಬಗ್ಗೆಯೂ ಪಿ. ಬಿ. ತೃಪ್ತಿಯನ್ನು ವ್ಯಕ್ತಪಡಿಸಿದೆ. ಈ ಸಮಿತಿಯ ಕರೆಯು ದೇಶದಾದ್ಯಂತ ದುಡಿಯುವ ಜನರಿಗೆ ಸ್ಫೂರ್ತಿಯನ್ನು ತುಂಬಿ, ವಿಶಾಲ ಹೋರಾಟವನ್ನು ಬೆಳೆಸುವುದು ಸಾಧ್ಯವಾಗಿದೆ. ವಿವಿಧ ರಾಜ್ಯಗಳಲ್ಲಿ ಈ ವಿರೋಧ ಪಕ್ಷಗಳು ಬಲವಾದ ಚಳುವಳಿಗಳನ್ನು ಬೆಳೆಸಿವೆ.

ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಇದ್ದಕ್ಕಿದ್ದಂತೆ ಹುಟ್ಟಿಕೊಂಡ ಹೋರಾಟವು ಈ ವಿರೋಧ ಪಕ್ಷಗಳ ನಾಯಕತ್ವದಲ್ಲಿ, ರೈತರನ್ನು ಮತ್ತು ಗ್ರಾಹಕರನ್ನು ಒಂದುಗೂಡಿಸಿದೆ. ಸಗಟು ವ್ಯಾಪಾರಿಗಳು, ದೊಡ್ಡ ಜಮೀನ್ದಾರರು, ಮುಂತಾದವರ ವಿರುದ್ಧ ಅವರನ್ನು ಉದ್ದೀಪಿಸಿದೆ. ಈ ಮೂಲಕ ಕಾರ್ಮಿಕರು ಮತ್ತು ರೈತರು ಮತ್ತು ಎಲ್ಲ ಶ್ರಮಜೀವಿಗಳು ಒಗ್ಗಟ್ಟಾಗಿ ಸರ್ಕಾರದ ನೀತಿಗಳ ವಿರುದ್ಧ ಹೋರಾಡುವುದಕ್ಕೆ ತಳಹದಿ ನಿರ್ಮಿಸಲಾಗುತ್ತಿದೆ.

ಈ ಭಾರಿ ಹೋರಾಟಗಳಿಂದ ಕೆಲವು ರಾಜ್ಯಗಳ ಕಾಂಗ್ರೆಸ್ ಸರ್ಕಾರಗಳು ಕೆಲವು ರಿಯಾಯಿತಿಗಳನ್ನು ಕೊಡುವಂತಾಗಿದೆ. ಆದರೆ ಏರುತ್ತಿರುವ ಹಣದುಬ್ಬರದ ಮುಂದೆ ಇದು ತೀರಾ ಕಡಿಮೆ ಎಂದು ಪಿ. ಬಿ. ಗಮನಿಸುತ್ತದೆ.

ಹೆಚ್ಚಾಗುತ್ತಿರುವ ದಮನ

ಈ ಪರಿಸ್ಥಿತಿಯಲ್ಲಿ, ಜನತೆಯ ಕೋಪಗಳನ್ನು ಕಡಿಮೆಮಾಡಲಾರದ ಸರ್ಕಾರವು ಈ ಚಳುವಳಿಗಳನ್ನು ಹತ್ತಿಕ್ಕಲು ದಮನಕಾರಿ ನೀತಿಗಳನ್ನು ಅನುಸರಿಸುತ್ತಿದೆ. ಈ ಉದ್ದೇಶಕ್ಕಾಗಿಯೇ ರಾಷ್ಟ್ರೀಯ ಭದ್ರತಾ ಮಸೂದೆಯನ್ನು ಸೃಷ್ಟಿಸಲಾಗಿದೆ. ಆರು ವಿರೋಧ ಪಕ್ಷಗಳ ಸಮನ್ವಯ ಸಮಿತಿಯು ಸಂಘಟಿಸುತ್ತಿರುವ ರೈತಚಳುವಳಿಯ ಮೇಲೆ ಇದನ್ನು ಪ್ರಯೋಗಿಸುವುದಾಗಿ ಬಿಹಾರದ ಮುಖ್ಯಮಂತ್ರಿ ಬೆದರಿಸುತ್ತಿದ್ದಾರೆ.

ಈ ಚಳುವಳಿಗಳು ರಾಜಕೀಯ ದುರುದ್ದೇಶದಿಂದ ಕೂಡಿವೆ ಎಂಬ ಪ್ರಚಾರವನ್ನು ಹರಡಲಾಗುತ್ತಿದೆ. ಮಾರ್ಕ್ಸ್‌ವಾದಿ ಪಕ್ಷದ ಮೇಲೆಯೇ ಹೆಚ್ಚು ಆಪಾದನೆ ಹೊರಿಸಲಾಗುತ್ತಿದೆ.

ಪೋಲೀಸರಿಗೆ ಬೆಂಬಲ

ಬಾಗಪತ್‌ನಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ನಡೆದದ್ದನ್ನು ವಿಚಾರಣಾ ಆಯೋಗ ಖಚಿತಪಡಿಸಿದೆ. ಆದರೆ ಸರ್ಕಾರವು ಅಧಿಕಾರಿಗಳನ್ನು ವಜಾಮಾತ್ರ ಮಾಡಿದೆಯೇ ಹೊರತು ಬೇರೆ ಕ್ರಮ ತೆಗೆದುಕೊಳ್ಳಲು ನಿರಾಕರಿಸುತ್ತಿದೆ.

ಮೊರಾದಾಬಾದ್‌ನಲ್ಲಿ ಮುಸ್ಲಿಮರ ಆಸ್ತಿಹಾನಿ ಮತ್ತು ಸಾಮೂಹಿಕ ಕೊಲೆಗಳಿಗೆ ಉತ್ತರಪ್ರದೇಶದ ಪಿ. ಎ. ಸಿ.ಯೇ ಕಾರಣವೆಂದು ಅಲ್ಪಸಂಖ್ಯಾತ ಕೋಮಿಗೆ ಸೇರಿದ 28 ಕಾಂಗ್ರೆಸ್ ಸಂಸತ್ ಸದಸ್ಯರು ಪ್ರಧಾನಿಗೆ ಪತ್ರ ಬರೆದಿದ್ದಾರೆ. ಆದರೆ ಉತ್ತರ ಪ್ರದೇಶದ ಸರ್ಕಾರ ಇದನ್ನು ಮುಚ್ಚಿಹಾಕಿಕೊಳ್ಳುತ್ತಿದೆ.

ಹರಿಜನರು ಬೆಳೆದ ಭತ್ತವನ್ನು ಲೂಟಿಮಾಡಲು ಬೋಧ್‌ಗಯಾದ ಮಹಾಂತನಿಗೆ ಬಿಹಾರ ಮುಖ್ಯಮಂತ್ರಿಯು ಭಾರಿ ಪೋಲೀಸ್‌ಪಡೆ ಕಳಿಸಿದ್ದಾರೆ. ಹರಿಜನರ ಮೇಲೆ ಪ್ರಧಾನಿಗಿರುವ ಕಳಕಳಿ ಎಷ್ಟು ಸುಳ್ಳು ಎಂಬುದು ಇದರಿಂದ ಗೊತ್ತಾಗುತ್ತದೆ. ಅನೇಕ ರಾಜ್ಯಗಳಲ್ಲಿ ಹರಿಜನರ ಮೇಲಿನ ದಬ್ಬಾಳಿಕೆಗಳಿಗೆ ಕಾಂಗ್ರೆಸ್ ಸರ್ಕಾರಗಳು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಭಾಗಲ್ಪುರದಲ್ಲಿ ಕೈದಿಗಳಿಗೆ ಕುರುಡು ಮಾಡಿರುವುದನ್ನು ಬಿಹಾರದ ಮುಖ್ಯಮಂತ್ರಿ ವಹಿಸಿಕೊಳ್ಳುತ್ತಿರುವುದಕ್ಕೆ ಪ್ರಧಾನಿ ಏನನ್ನೂ ಹೇಳುತ್ತಿಲ್ಲ.

ಪ್ರಧಾನಮಂತ್ರಿಯವರು ಚಳುವಳಿಗಳನ್ನು ಹತ್ತಿಕ್ಕುವ ಮಾತುಗಳನ್ನು ಆಡುತ್ತಿದ್ದಾರೆಯೇ ಹೊರತು, ಗುತ್ತೇದಾರಿಗಳು, ಅವರ ವಿದೇಶಿ ಸಹವರ್ತಿಗಳು, ಜಮೀನ್ದಾರರು, ದಾಸ್ತಾನುಗಾರರು ಮತ್ತು ಲಾಭಕೋರರ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ.

ಸರ್ಕಾರವು ಆಹಾರಧಾನ್ಯಗಳಿಗಾಗಿ ನಿಗದಿಮಾಡಿರುವ ಬೆಲೆಯೂ ಸಹ ಬಡರೈತರಿಗೆ ಸಿಗುತ್ತಿಲ್ಲ. ಏಕೆಂದರೆ ಸರ್ಕಾರವು ನಿಗದಿ ಮಾಡಿರುವ ಬೆಲೆಗಳನ್ನು ಖಚಿತವಾಗಿ ಕೊಡಲು ಮಾರುಕಟ್ಟೆಯನ್ನು ಪ್ರವೇಶಿಸಲು ಭಾರತ ಆಹಾರ ಕಾರ್ಪೊರೇಷನ್ ನಿರಾಕರಿಸುತ್ತಿದೆ ಎಂಬುದನ್ನೂ ಪಿ.ಬಿ. ಗಮನಿಸಿತು.

ವಾಮನಾಯಕತ್ವದ ರಾಜ್ಯಗಳಲ್ಲಿ

ಈ ಸನ್ನಿವೇಶದಲ್ಲಿ, ಪ. ಬಂಗಾಳದ ಎಡರಂಗದ ಸರ್ಕಾರವು ಬಡರೈತರ ನೆರವಿಗೆ ಬಂದಿರುವುದು ಗಮನಾರ್ಹವಾಗಿದೆ. ಬಡರೈತರ ಭತ್ತವನ್ನು ಕೇಂದ್ರಸರ್ಕಾರ ನಿಗದಿಮಾಡಿರುವ ಬೆಲೆಗಿಂತಲೂ ಹೆಚ್ಚಿನ ಬೆಲೆಯಲ್ಲಿ ಅದು ಕೊಳ್ಳುತ್ತಿದೆ. ಕೇರಳದ ಸರ್ಕಾರವೂ ಕೂಡ ಹೆಚ್ಚಿನ ಬೆಲೆಯಲ್ಲಿ ಕೊಂಡಿದೆ. ಈ ರಾಜ್ಯಗಳ ಕಲ್ಯಾಣ ಕ್ರಮಗಳ ಸಫಲತೆಯಿಂದ ಉತ್ತೇಜಿತರಾಗಿ ಬೇರೆ ರಾಜ್ಯಗಳಲ್ಲಿಯೂ ಸಹ ದುಡಿಯುವ ಜನರು ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯಕ್ಕಾಗಿ ಹೋರಾಡಬಹುದೆಂದು ದಿಗಿಲುಬಿದ್ದ ಇಂದಿರಾಗಾಂಧಿ ಮತ್ತಿತರ ಕಾಂಗ್ರೆಸ್ ನಾಯಕರು ಈ ಸರ್ಕಾರಗಳ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ತ್ರಿಪುರಾದಲ್ಲಿ ಉಪಜಾತಿ ಸಮಿತಿಯೊಂದಿಗೆ ಸೇರಿ ಕಾಂಗ್ರೆಸ್ ಪಕ್ಷವು ಛಿದ್ರಕಾರಿ ಚಟುವಟಿಕೆಗಳನ್ನು ನಡೆಸುತ್ತಿದೆ.

ಈಶಾನ್ಯ ಪ್ರದೇಶ

ಅಸ್ಸಾಂನಲ್ಲಿ ಈಗಿರುವ ನೆನೆಗುದಿ ಪರಿಸ್ಥಿತಿ ಮುಂದುವರೆದರೆ ಇಡೀ ಈಶಾನ್ಯ ಪ್ರದೇಶವೇ ಭಯಂಕರವಾಗಬಹುದೆಂದು ಪಿ. ಬಿ. ಸೂಚಿಸುತ್ತದೆ. ಈ ಪ್ರದೇಶವನ್ನು ಭಾರತದಿಂದ ಪ್ರತ್ಯೇಕಗೊಳಿಸಲು ಯೋಚಿಸುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಬಗ್ಗೆ ಗಮನಹರಿಸಬೇಕಾಗಿದೆ. ಇತ್ತೀಚೆಗೆ ಬಿ. ಜೆ. ಪಿ. ಅಧ್ಯಕ್ಷ ಎ. ಬಿ. ವಾಜಪೇಯಿ ಅವರು ಸೂಚಿಸಿರುವ ಆರು ಪರಿಹಾರ ಸೂತ್ರಗಳು ಈ ಸಮಸ್ಯೆಗೆ ಪರಿಹಾರವೇ ಅಲ್ಲ. ಯಾವ ಪೂರ್ವಕರಾರೂ ಇಲ್ಲದೆ, ಮಾತುಕತೆಗೆ ಬರುವಂತೆ ಚಳುವಳಿಯ ನಾಯಕರಿಗೆ ಪಿ. ಬಿ. ಕರೆ ನೀಡಿದೆ.

ಡಿ. ಎಂ. ಕೆ. ಮತ್ತು ಎ. ಐ. ಡಿ. ಎಂ. ಕೆ.ಗಳೆರಡೂ ರಾಷ್ಟ್ರೀಯ ಭದ್ರತಾ ಮಸೂದೆಯನ್ನು ಬೆಂಬಲಿಸಲು ನಿರ್ಧರಿಸಿರುವುದನ್ನು ಪಿ.ಬಿ. ವಿಷಾದದಿಂದ ಗಮನಿಸಿದೆ.

ಸಂಸತ್ ಮಾದರಿ ಸರ್ಕಾರವನ್ನು ಬದಲಾಯಿಸುವ ಇಚ್ಛೆ ತಮಗಿಲ್ಲವೆಂದು ಇಂದಿರಾಗಾಂಧಿ ಅವರು ಪದೇ ಪದೇ ಹೇಳಿದ್ದಾರೆ. ಆದರೆ ಅವರ ಪಕ್ಷದವರು ಅಧ್ಯಕ್ಷೀಯ ಮಾದರಿಗಾಗಿ ನಡೆಸುತ್ತಿರುವ ಪ್ರಚಾರವನ್ನು ತಡೆಯುತ್ತಿಲ್ಲ.

ಒಡಕುಗಳು

ಕೇಂದ್ರ ಮತ್ತು ರಾಜ್ಯಸರ್ಕಾರಗಳು ಮತ್ತು ಪಕ್ಷಗಳು ಒಡಕುಗಳು ಗುಂಪುಗಳಿಂದ ತುಂಬಿಹೋಗಿವೆ. ಈ ಗುಂಪುಗಳು ಸಭೆಗಳಲ್ಲಿ ಗುದ್ದಾಟಗಳಿಗೂ ಇಳಿಯುತ್ತವೆ. ಕೊಲೆಗಳೂ ನಡೆದಿವೆ. ಆಳುವ ಕಾಂಗ್ರೆಸ್ ಪಕ್ಷದೊಳಗಿರುವ ಈ ಜಗಳಗಳು, ಜನತೆಯ ಉದ್ಧಾರಕ್ರಮಗಳಿಂದ ದೂರಸರಿದಿವೆ. ಬೂರ್ಜ್ವಾ–ಭೂಮಾಲೀಕ ಪಕ್ಷಗಳು ಅಧಿಕಾರ ಪಡೆದು ಸಂಪತ್ತನ್ನು ಗಳಿಸುವ ಉದ್ದೇಶಕ್ಕೆ ಹೊರಟಿರುವ ಆರ್ಥಿಕ ಮತ್ತು ರಾಜಕೀಯ ಸನ್ನಿವೇಶದಲ್ಲಿ ಇಂಥ ಗುಂಪುಜಗಳಗಳು ಅನಿವಾರ್ಯ.

ಜನತೆಯ ದುಃಖಗಳು, ಬಡತನ, ನಿರುದ್ಯೋಗ ಹೆಚ್ಚುತ್ತಿದ್ದು ಆರ್ಥಿಕ ವ್ಯವಸ್ಥೆಯು ಬಿಕ್ಕಟ್ಟಿನಿಂದ ತುಂಬುತ್ತಿರುವ ಈ ಸಮಯದಲ್ಲಿ, ಸರ್ವಾಧಿಕಾರದತ್ತ ಓಡುವುದು ಮುಂದುವರೆಯುತ್ತದೆ.

ಎಲ್ಲ ಶಕ್ತಿಗಳನ್ನೂ ಸಂಘಟಿಸಿ

ಆದರೆ ಈ ಓಟವನ್ನು ತಡೆಯಲು ಸಾಧ್ಯವೆಂದು ಪಿ. ಬಿ.ಗೆ ಭರವಸೆಯಿದೆ. ಇದಕ್ಕೆ ಜನರು ಸಂಘಟಿತರಾಗಬೇಕು. ಇಂಥ ಸರ್ವಾಧಿಕಾರಿ ಧೋರಣೆಗಳ ವಿರುದ್ಧ ಹೋರಾಡಬೇಕು.

ಜನತೆಯ ಹೋರಾಟಗಳನ್ನು ಬಲಪಡಿಸಲು ಎಲ್ಲ ಶಕ್ತಿಗಳನ್ನೂ ಒಂದುಗೂಡಿಸುವಂತೆ ಪಿ. ಬಿ. ತನ್ನೆಲ್ಲ ಘಟಕಗಳಿಗೆ ನಿರ್ದೇಶನ ಕೊಟ್ಟಿದೆ.

●

ಹರಿಜನ-ಗಿರಿಜನರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳು

ಹರಿಜನ-ಗಿರಿಜನರಿಗಾಗಿ ನೇಮಿಸಲ್ಪಟ್ಟಿರುವ ಕಮೀಷನರ್ ಶಿಶಿರ್‌ಕುಮಾರ್ ಅವರು ಲೋಕಸಭೆಯಲ್ಲಿ ಈ ರೀತಿ ತಿಳಿಸಿದ್ದಾರೆ.

1976ರಲ್ಲಿ ಹರಿಜನರ ಮೇಲೆ ನಡೆದ ದಬ್ಬಾಳಿಕೆ	6,197
1977 " " "	10,879
1978 " " "	15,053
1976ರಲ್ಲಿ ಗಿರಿಜನರ ಮೇಲೆ ನಡೆದ ದಬ್ಬಾಳಿಕೆ	1,065
1977 " " "	1,138
1978 " " "	1,632

ಈ ವರ್ಷಗಳಲ್ಲಿ 456 ಕೊಲೆಗಳು, 541 ಮಾನಭಂಗಗಳು ಮತ್ತು 1202 ಸುಟ್ಟುಹಾಕಿದ ಘಟನೆಗಳು ನಡೆದಿವೆ ಎಂದು ಅವರು ಹೇಳಿದ್ದಾರೆ. ಈ ಕೃತ್ಯಗಳು ದಿನೇದಿನೇ ಹೆಚ್ಚುತ್ತಿವೆ ಎಂಬ ಅಂಶ ಅವರು ನೀಡಿರುವ ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ.

ದಕ್ಷಿಣ ಆಫ್ರಿಕಾದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ

[ಹಿಂದಿನ ಸಂಚಿಕೆಯಿಂದ]

ಜನಾಂಗ ದ್ವೇಷಿ ಸರ್ಕಾರದ "ಬಂಟೂಸ್ತಾನ" ಕಾರ್ಯಕ್ರಮ

ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತರ ಸರ್ಕಾರ ತನ್ನ ವರ್ಣದ್ವೇಷ ನೀತಿಯನ್ನು ಸಡಿಲಗೊಳಿಸುತ್ತಿದೆ ಎಂದು ಪಾಶ್ಚಿಮಾತ್ಯ ದೇಶಗಳ ಪತ್ರಿಕೆಗಳು ಜಗತ್ತನ್ನು ನಂಬಿಸಲು ಪ್ರಯತ್ನಿಸುತ್ತಿವೆ. ಆದರೆ ವಾಸ್ತವತೆಯೇನೆಂದರೆ ವರ್ಣದ್ವೇಷಿ ಕಾನೂನುಗಳು ಸಂಖ್ಯೆಯಲ್ಲೂ ತೀವ್ರತೆಯಲ್ಲೂ ಹೆಚ್ಚುತ್ತಿವೆ. ಹಿಂದೆ ಹೇಳಿದಂತೆ ಕರಿಯ ಜನಾಂಗಗಳ ಕಾರ್ಮಿಕರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು, ಯುವಕರು ಇತ್ಯಾದಿ ಎಲ್ಲರಿಂದಲೂ ತೀವ್ರ ವಿರೋಧ ಬರುತ್ತಿದ್ದರೂ, ಅಂತರರಾಷ್ಟ್ರೀಯ ಮಟ್ಟದಲ್ಲೂ ವರ್ಣದ್ವೇಷ ನೀತಿಗೆ ಸಾರ್ವತ್ರಿಕ ಖಂಡನೆ ಬರುತ್ತಿದ್ದರೂ ಸರ್ಕಾರದ ವರ್ಣದ್ವೇಷದ ನಿಲುವು ಸ್ವಲ್ಪವೂ ಸಡಿಲವಾಗಿಲ್ಲ. "ದಕ್ಷಿಣ ಆಫ್ರಿಕಾದಲ್ಲಿ ಜನಾಂಗ ಸಂಬಂಧಗಳ ಮೇಲೆ ಪರಿಣಾಮ ಬೀರುವ ಕಾನೂನುಗಳು" ಎಂಬ ಇತ್ತೀಚೆಗೆ ಪ್ರಕಟವಾದ ಪುಸ್ತಕದ 600 ಪುಟಗಳಲ್ಲೂ ವರ್ಣದ್ವೇಷ ನೀತಿಯನ್ನು ಒಳಗೊಂಡ ಎಲ್ಲಾ ಪದ್ಧತಿಗಳನ್ನು ಹಾಗೂ ಕಾನೂನುಗಳನ್ನು ಪಟ್ಟಿ ಮಾಡುವುದು ಸಾಧ್ಯವಾಗಿಲ್ಲವಂತೆ! ಬಹುಸಂಖ್ಯಾತ ಕರಿಯ ಜನಾಂಗಗಳನ್ನು ಅವರ ಶ್ರಮಶಕ್ತಿ ಉತ್ಪಾದಿಸಿದ ಸಂಪತ್ತಿನಲ್ಲಿ ಸಲ್ಲಬೇಕಾದ ನ್ಯಾಯವಾದ ಪಾಲಿನಿಂದ ಶಾಶ್ವತವಾಗಿ ವಂಚಿಸಲು ರಾಷ್ಟ್ರೀಯ ರಾಜಕೀಯ ಪ್ರತಿನಿಧಿತ್ವವನ್ನು ಶಾಶ್ವತವಾಗಿ ನಿರಾಕರಿಸಲು ಹೊಸ ಹೊಸ ಕಾನೂನುಗಳು ರಚಿತವಾಗುತ್ತಿವೆ. 1979ರಲ್ಲಿ ಸರ್ಕಾರೀ ಅಂಕಿ-ಅಂಶಗಳ ಪ್ರಕಾರ 12000 ಆಫ್ರಿಕನ್ನರನ್ನು "ರಹದಾರಿ ಕಾನೂನು"ಗಳ ಪ್ರಕಾರ ಬಂಧಿಸಲಾಗಿದೆಯಂತೆ. ಉದ್ಯೋಗ ದೊರಕಿಸಿಕೊಳ್ಳುವುದರಿಂದ ಹಿಡಿದು ರಜೆಯ ಮೇಲೆ ಪ್ರವಾಸ ಹೋಗುವುದು ಇತ್ಯಾದಿ ಎಲ್ಲದಕ್ಕೂ ಪರ್ಮಿಟ್ ಪಡೆಯಬೇಕಾದ ಕಾನೂನುಗಳು ಸಾವಿರಾರು ಆಫ್ರಿಕನ್ನರ ಬಾಳನ್ನು ಮತ್ತಷ್ಟು ದುರ್ಭರಗೊಳಿಸುತ್ತಿವೆ. ಈ ಕಾನೂನುಗಳು ಆ ದೇಶದ ಬಿಳಿಯರಿಗೆ ಅನ್ವಯವಾಗುವುದೇ ಇಲ್ಲ.

ಈ ರೀತಿ ನೇರ ದಮನ ಕ್ರಮಗಳಲ್ಲದೆ ಕೆಲವು ಆಮಿಷ ತೋರಿಸುವ ಕ್ರಮಗಳ ಮೂಲಕವೂ ಬಿಳಿಯರ ಅಲ್ಪಸಂಖ್ಯಾತ ಸರ್ಕಾರ ತನ್ನ ಹಿಡಿತವನ್ನು ಖಾಯಂಗೊಳಿಸಲು ಪ್ರಯತ್ನಿಸುತ್ತಿದೆ. 'ಬಂಟೂಸ್ತಾನ್' ಕಾರ್ಯಕ್ರಮ ಇದರಲ್ಲಿ ಮುಖ್ಯವಾದುದು. ದೇಶದ 13% ಜಮೀನನ್ನು ಬಹುಸಂಖ್ಯಾತ ಕರಿಯರಿಗೆ 'ಮೀಸಲು' ಎಂದಿಡಲಾಗಿದೆಯೆಂದು ಹಿಂದೆ ಹೇಳಿದೆ. ಇಂತಹ ಪ್ರದೇಶಗಳ ವಿವಿಧ ಬಣಗಳಿಗೆ 'ಸ್ವದೇಶ'ಗಳನ್ನು ರಚಿಸಿ ಅವಕ್ಕೆ 'ಸ್ವಾತಂತ್ರ್ಯ' ಕೊಡುವ ಈ ಯೋಜನೆಗೆ 'ಬಂಟೂಸ್ತಾನ್' ಕಾರ್ಯಕ್ರಮ ಎಂದು ಹೆಸರು. ನಿಜವಾಗಿ ಈ 'ಸ್ವತಂತ್ರ ಬಂಟೂಸ್ತಾನ'ಗಳು ಯಾವ ಅರ್ಥದಲ್ಲೂ ಸ್ವತಂತ್ರವಲ್ಲ. ಆರ್ಥಿಕವಾಗಿ, ರಾಜಕೀಯವಾಗಿ, ಸೈನಿಕವಾಗಿ ಎಲ್ಲಾ ರೀತಿಯಿಂದಲೂ ದಕ್ಷಿಣ ಆಫ್ರಿಕಾದ ಸರಕಾರವನ್ನೇ ಅವಲಂಭಿಸಿರಬೇಕಾದ ಈ ಬಂಟೂಸ್ತಾನಗಳ ಮೂಲಕ ಮೊದಲಿನಂತೆ ದಕ್ಷಿಣ ಆಫ್ರಿಕಾ ಅಗ್ಗದ ಶ್ರಮಶಕ್ತಿಯನ್ನು ಪಡೆಯುವುದು ಮಾತ್ರವಲ್ಲ, ಕರಿಯ ಜನಾಂಗಗಳ ಕೆಲವು ಸ್ವಾರ್ಥಿ, ಸಮಯಸಾಧಕ ವ್ಯಕ್ತಿಗಳು, ಗುಂಪುಗಳನ್ನು ತಮ್ಮ ಬಗಲಿಗೆ ಹಾಕಿಕೊಳ್ಳುವುದು ಹಾಗೂ ಜಗತ್ತಿಗೆ ತಾನು ಪ್ರಜಾಪ್ರಭುತ್ವವಾದಿ ಎಂದು ಸಾರಲು ಅನುಕೂಲಮಾಡಿಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶ. ಇದರ ಮೂಲಕ ವಿವಿಧ ಆಫ್ರಿಕನ್ ಬಣಗಳು ಈಗ ವಿಮೋಚನಾ ಹೋರಾಟದಲ್ಲಿ ಸಾಧಿಸಿರುವ ಐಕ್ಯತೆಯನ್ನು ಒಡೆದು ವಿಮೋಚನಾ ಹೋರಾಟವನ್ನು ಪ್ರಭಾವಪೂರ್ಣವಾಗಿ ತಡೆಗಟ್ಟಬಹುದೆಂದು ಬಿಳಿಯ ವರ್ಣದ್ವೇಷಿಗಳ ಹಂಚಿಕೆ. ಇದನ್ನು ಆಫ್ರಿಕನ್ ಜನತೆ ಕಂಡುಕೊಂಡು ಇಂತಹ ಮೋಸದ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಿದೆ.

ವರ್ಣದ್ವೇಷಿ ಫ್ಯಾಸಿಸ್ಟರಿಗೆ ಸಾಮ್ರಾಜ್ಯಶಾಹಿಗಳ ಬೆಂಬಲ

ಆಂತರಿಕವಾಗಿ ಹಾಗೂ ಬಹಿರಂಗವಾಗಿ ಎಲ್ಲಾ ಕಡೆಯಿಂದ ತೀವ್ರ ವಿರೋಧವನ್ನು ಎದುರಿಸಿಯೂ ದಕ್ಷಿಣ ಆಫ್ರಿಕಾದ ಬಿಳಿಯರ ಅಲ್ಪಸಂಖ್ಯಾತ ಕೂಟ ಇನ್ನೂ ಅಧಿಕಾರ ನಡೆಸುವುದು ಹೇಗೆ ಸಾಧ್ಯವಾಗಿದೆ ಎಂಬ ಪ್ರಶ್ನೆಯೇಳುವುದು ಸ್ವಾಭಾವಿಕ. ದಕ್ಷಿಣ ಆಫ್ರಿಕಾದ ಆರ್ಥಿಕ ವ್ಯವಸ್ಥೆಯಲ್ಲಿ ವಿದೇಶೀ ಬಂಡವಾಳದ ಪಾಲನ್ನೂ, ಅಮೇರಿಕಾ, ಬ್ರಿಟನ್, ಫ್ರಾನ್ಸ್ ಮೊದಲಾದ ಪಾಶ್ಚಿಮಾತ್ಯ ದೇಶಗಳು ಹಾಗೂ ಜಪಾನ್‌ನ ಇಬ್ಬಗೆಯ ಧೋರಣೆಯನ್ನು ವಿಶ್ಲೇಷಿಸಿದಾಗ ಈ ಪ್ರಶ್ನೆಗೆ ಸಮಾಧಾನಕರ ಉತ್ತರ ಸಿಗುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ಹೂಡಿದ ಬಂಡವಾಳಕ್ಕೆ ದೊರೆಯುವ ಲಾಭದ ದರ ಜಗತ್ತಿನ ಬೇರೆ ಯಾವುದೇ ದೇಶಕ್ಕಿಂತ ಹೆಚ್ಚಿದೆ. ಇದಕ್ಕೆ ಕಾರಣ ಆಫ್ರಿಕನ್ ಶ್ರಮಶಕ್ತಿಯ ನಿರ್ದಯ ಶೋಷಣೆ. ದಕ್ಷಿಣ ಆಫ್ರಿಕಾದಲ್ಲಿ ಹೂಡಲ್ಪಟ್ಟ ವಿದೇಶೀ ಬಂಡವಾಳದ ಒಟ್ಟು ಮೊತ್ತ 5100 ಕೋಟಿ ರೂಪಾಯಿಗಿಂತಲೂ ಹೆಚ್ಚಿದೆ. ಇದರಲ್ಲಿ 80% ದಷ್ಟು ನೇರವಾಗಿ ಅಥವಾ ಪರೋಕ್ಷವಾಗಿ ವಿದೇಶೀ ಕಂಪೆನಿಗಳ ಹತೋಟಿಯಲ್ಲಿದೆ. ಬ್ರಿಟನ್, ಅಮೇರಿಕಾ ಹಾಗೂ ಫ್ರಾನ್ಸ್ ಒಟ್ಟಾಗಿ ವಿದೇಶೀ ಬಂಡವಾಳದ 80%ದ ಮೇಲೆ ತಮ್ಮ ಹತೋಟಿ ಹೊಂದಿದೆ. ಆದ್ದರಿಂದ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಬಂಡವಾಳಕ್ಕೆ ಭದ್ರತೆಯನ್ನೂ ಅತೀ ಹೆಚ್ಚು ದರದಲ್ಲಿ ಲಾಭವನ್ನೂ ಕೊಡಿಸುವ ವರ್ಣದ್ವೇಷೀ ವ್ಯವಸ್ಥೆ ಮುಂದುವರಿಯಬೇಕಾದುದು ಸಾಮ್ರಾಜ್ಯಶಾಹಿಗಳಿಗೆ ಅತೀ ಅಗತ್ಯ. ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಬಿಳಿಯರ ಸರ್ಕಾರ ಎಲ್ಲ ವಿರೋಧಗಳನ್ನು ಎದುರಿಸಿ ಇನ್ನೂ ಮುಂದುವರಿಯುತ್ತಿರುವುದರ ಹಿನ್ನೆಲೆಯೇ ಇದು. ಕೇವಲ ಆರ್ಥಿಕವಾಗಿ ಮಾತ್ರವಲ್ಲ, ರಾಜಕೀಯ ಹಾಗೂ ರಣ ನೀತಿಯ ದೃಷ್ಟಿಯಿಂದಲೂ ಸಾಮ್ರಾಜ್ಯಶಾಹಿಗಳಿಗೆ ಇದು ಅತೀ ಮಹತ್ವದ ಕ್ಷೇತ್ರ. ವಿಶ್ವಾದ್ಯಂತ ತಮ್ಮ ಮೇಲುಗೈಯನ್ನು ಮತ್ತೆ ಸ್ಥಾಪಿಸಲು ಮತ್ತು ಸಮಾಜವಾದ ಮತ್ತು ಪ್ರಗತಿಗಾಗಿ ನಡೆಯುವ ಹೋರಾಟಗಳನ್ನು, ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಮುರಿಯಲು ದಕ್ಷಿಣ ಆಫ್ರಿಕಾದ ಮೇಲೆ ಹತೋಟಿ ಹೊಂದಿರುವುದು ಭೌಗೋಳಿಕ ದೃಷ್ಟಿಯಿಂದ ಅತೀ ಮಹತ್ವಪೂರ್ಣವಾದದ್ದು.

1960ರಲ್ಲಿ ಶಾರ್ಪ್‌ವಿಲೆ ಹತ್ಯಾಕಾಂಡದ ನಂತರ ಎ. ಎನ್. ಸಿ. ಹಾಗೂ ಇತರ ರಾಜಕೀಯ ಸಂಘಟನೆಗಳನ್ನು ನಿಷೇಧಿಸಿದಾಗ 1962ರಲ್ಲಿ ಸಂಯುಕ್ತ ರಾಷ್ಟ್ರ ಸಂಘ ಒಂದು ನಿರ್ಣಯ ಕೈಗೊಂಡು ದಕ್ಷಿಣ ಆಫ್ರಿಕಾದ ವರ್ಣದ್ವೇಷೀ ಸರ್ಕಾರದೊಡನೆ ಸಂಬಂಧ ಕಡಿದುಕೊಂಡು ಅದರ ಮೇಲೆ ಆರ್ಥಿಕ ಬಹಿಷ್ಕಾರ ಹೇರಬೇಕು ಎಂದು ತನ್ನ ಸದಸ್ಯರಿಗೆ ಕರೆ ನೀಡಿತ್ತು. ಆದರೆ 18 ವರ್ಷಗಳ ನಂತರವೂ 140 ಸದಸ್ಯ ರಾಷ್ಟ್ರಗಳಲ್ಲಿ 43 ರಾಷ್ಟ್ರಗಳು ದಕ್ಷಿಣ ಆಫ್ರಿಕಾ ಜನಾಂಗದ್ವೇಷೀ ಸರಕಾರದೊಡನೆ ಈಗಲೂ ಸಂಬಂಧ ಇಟ್ಟುಕೊಂಡಿವೆಯೆಂದು ವರ್ಣದ್ವೇಷದ ವಿರುದ್ಧ ಸಂಯುಕ್ತ ರಾಷ್ಟ್ರಸಂಘದ ವಿಶೇಷ ಸಮಿತಿಯ ನವೆಂಬರ್ 8, 1980ರ ವರದಿ ತಿಳಿಸುತ್ತದೆ. ಈ 43 ದೇಶಗಳಲ್ಲಿ ಎಲ್ಲಾ ಬಂಡವಾಳಶಾಹಿ ದೇಶಗಳು ಸೇರಿವೆಯೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇವುಗಳಲ್ಲಿ 'ಮಾನವ ಹಕ್ಕುಗಳ' ಮಹಾ ರಕ್ಷಕರೆಂದು ಡಂಗುರ ಸಾರುವ ದೇಶಗಳೂ ಸೇರಿವೆ. ಆ ವರದಿಯಲ್ಲಿ 16 ದೇಶಗಳು ಸೈನಿಕ ಸಲಹೆಗಾರರ ಮೂಲಕ ದಕ್ಷಿಣ ಆಫ್ರಿಕಾದೊಡನೆ ಸಂಬಂಧ ವಿಟ್ಟುಕೊಂಡಿವೆಯೆಂದು ಹೇಳಲಾಗಿದೆ. ದಕ್ಷಿಣ ಆಫ್ರಿಕಾದ ವಿದೇಶೀ ಬಂಡವಾಳದ 80%ದ ಮೇಲೆ ಹತೋಟಿ ಪಡೆದಿರುವ ಬ್ರಿಟನ್, ಅಮೇರಿಕಾ ಹಾಗೂ ಫ್ರಾನ್ಸ್ ಈ 16 ದೇಶಗಳಲ್ಲಿ ಪ್ರಮುಖವಾದವುಗಳು.

ಅಪಾರ ಶಸ್ತ್ರ ಸಂಗ್ರಹ

ಡಿಸೆಂಬರ್ 1963ರಲ್ಲಿ ಅಂಗೀಕೃತವಾದ ಸಂಯುಕ್ತ ರಾಷ್ಟ್ರ ಸಂಘದ ಇನ್ನೊಂದು ನಿರ್ಣಯ "ಶಸ್ತ್ರಾಸ್ತ್ರಗಳನ್ನು ತಯಾರಿಸಲು ಉಪಯೋಗಿಸುವ ಉಪಕರಣಗಳು ಹಾಗೂ ಸಾಮಗ್ರಿಗಳನ್ನು ದಕ್ಷಿಣ ಆಫ್ರಿಕಾಕ್ಕೆ ಮಾರುವುದನ್ನು ತಕ್ಷಣ ನಿಲ್ಲಿಸಬೇಕು" ಎಂದು ಕರೆಕೊಟ್ಟಿದೆ. ಆದರೆ ಅಮೇರಿಕಾ, ಕೆನಡಾ, ಬ್ರಿಟನ್, ಫ್ರಾನ್ಸ್, ಪಶ್ಚಿಮ ಜರ್ಮನಿ, ಬ್ರಿಜಿಲ್, ಬೆಲ್ಜಿಯಮ್ ಹಾಗೂ ಪರಾಗ್ವೇ ದೇಶಗಳು ಸೇರಿ ನಡೆಸಿದ "ಪಿತೂರಿ"ಯ ಪರಿಣಾಮವಾಗಿ ದಕ್ಷಿಣ ಆಫ್ರಿಕಾ ಮಾರಕಾಸ್ತ್ರಗಳ ಗೂಢಜಾಲವನ್ನು ಪಡೆಯಲು ಸಾಧ್ಯವಾಗಿದೆ ಎಂದು 21 ಅಕ್ಟೋಬರ್ 1980ರ ಒಂದು ಬ್ರಿಟಿಷ್ ಟೆಲಿವಿಷ್ರ ಕಾರ್ಯಕ್ರಮದಲ್ಲಿ ಹೇಳಲಾಗಿದೆ.

1979ರ ಸೆಪ್ಟೆಂಬರ್ 22ರಂದು ದಕ್ಷಿಣ ಆಫ್ರಿಕಾ ದಕ್ಷಿಣ ಅಟ್ಲಾಂಟಿಕ್ ಮೇಲೆ ನಡೆಸಿದ ಗುಪ್ತ ಅಣು ವಿಸ್ಫೋಟ ಅಮೇರಿಕಾದ ನೆರವಿನಿಂದಲೇ ನಡೆದಿತ್ತು. ಅಮೇರಿಕಾದ ಸರ್ಕಾರ ಪ್ರಮಾದವಶಾತ್ ಕೈಗೊಂಡ ಕೆಲವು ಕ್ರಮಗಳಿಂದ ಹೀಗಾಯಿತೆಂದು ಹೇಳಿ ಈ ಗುಪ್ತ ನೆರವನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ.

ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳು ಒಂದೆಡೆ ದಕ್ಷಿಣ ಆಫ್ರಿಕಾದ ಫ್ಯಾಸಿಸ್ಟ್ ಆಡಳಿತದಿಂದ ಬವಣೆ ಪಡುತ್ತಿರುವ ಜನರಿಗೆ ಸಹಾನುಭೂತಿ ವ್ಯಕ್ತಪಡಿಸುತ್ತವೆ. ಇನ್ನೊಂದೆಡೆ ಇವೇ ದೇಶಗಳು ಫ್ಯಾಸಿಸ್ಟ್ ಆಡಳಿತಕ್ಕೆ ಗುಪ್ತವಾಗಿ ಎಲ್ಲಾ ರೀತಿಯ ನೆರವು ಕೊಟ್ಟು ಅದು ಮುಂದುವರಿಯುವಂತೆ ಮಾಡುತ್ತಿದ್ದಾರೆ. ಇದರಿಂದಾಗಿಯೇ ಕಳೆದ ಎರಡು ದಶಕಗಳಲ್ಲಿ ಆ ದೇಶದ ರಕ್ಷಣಾ ವೆಚ್ಚ ಹತ್ತು ಪಟ್ಟು ಹೆಚ್ಚಿದೆ. ಇದೇ ಅವಧಿಯಲ್ಲಿ ಬ್ರಿಟನ್, ಅಮೇರಿಕಾ, ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ ಹಾಗೂ ಬೆಲ್ಜಿಯಮ್ ದೇಶಗಳ ಸಕ್ರಿಯ ಸಹಾಯದಿಂದಾಗಿ ಈಗ ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಬಿಳಿಯ ಸರ್ಕಾರ ಒಂದು ಬಹುದೊಡ್ಡ

(6ನೇ ಪುಟ ನೋಡಿ)

ದಕ್ಷಿಣ ಆಫ್ರಿಕೆಯ ಹೋರಾಟಗಾರರಿಗೆ ಅಭಿನಂದನೆಗಳು

ಜನವರಿ 8, 1981ರಂದು ಎ. ಎನ್. ಸಿ. (ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್) ತನ್ನ 69ನೇ ವಾರ್ಷಿಕೋತ್ಸವವನ್ನು ಆಚರಿಸಿತು. ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಎ. ಎನ್. ಸಿ. ಗೆ ತನ್ನ ಅಭಿನಂದನೆಗಳನ್ನು ಕಳಿಸಿದೆ.

ಕಳೆದ ದಶಕದಲ್ಲಿ ಆಫ್ರಿಕೆಯಲ್ಲಿ ಗಮನಾರ್ಹ ಬೆಳವಣಿಗೆಗಳಾಗಿವೆ. ಮೊಜಾಂಬಿಕ್, ಅಂಗೋಲಾ ಮೊದಲಾದ ದೇಶಗಳು ಸ್ವತಂತ್ರವಾಗಿರುವುವಲ್ಲದೇ, ಕಳೆದ ವರ್ಷ ಜಿಂಬಾಬ್ವೆ (ರೊಡ್ಡೇಸಿಯಾ)ಯೂ ಸ್ವಾತಂತ್ರ್ಯ ದೊರಕಿಸಿಕೊಂಡಿತು.

ಜಗತ್ತಿನಾದ್ಯಂತ ಮತ್ತು ಆಫ್ರಿಕೆಯಲ್ಲಿ ಗಮನಾರ್ಹ ಬೆಳವಣಿಗೆಗಳಾಗಿದ್ದರೂ, ಆಫ್ರಿಕೆಯಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ನಿರ್ದಯವಾಗಿ ಬಗ್ಗುಬಡಿಯಲಾಗುತ್ತಿದೆ. ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳು, ಸಂಯುಕ್ತ ರಾಷ್ಟ್ರಸಂಸ್ಥೆಯ ನಿಬಂಧನೆಗಳನ್ನು ಜಾಗತಿಕ ಅಭಿಮತವನ್ನು ಉಲ್ಲಂಘಿಸಿ ಆಫ್ರಿಕಾದ ಜನತೆಯ ಹೋರಾಟಗಳನ್ನು ಬಗ್ಗುಬಡಿಯಲು ಕುಮ್ಮಕ್ಕು ಕೊಡುತ್ತಿವ.

ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ಮಹಾನ್ ಹೋರಾಟದಲ್ಲಿ ಹುತಾತ್ಮರಾದ ಸಂಗಾತಿಗಳಿಗ ಶ್ರದ್ಧಾಂಜಲಿ ಅರ್ಪಿಸುತ್ತ, 18 ವರ್ಷಗಳಿಂದ ಜೈಲಿನಲ್ಲಿ ಕೊಳೆಯುತ್ತಿರುವ ನೆಲ್ಸನ್‌ಮಂಡಲಾರನ್ನು ಬಿಡುಗಡೆಗೆ ಸಿ.ಪಿ.ಐ.(ಎಂ) ಒತ್ತಾಯಿಸಿದೆ.

ಆಫ್ರಿಕಾದ ಜನತೆಯ ತ್ಯಾಗ, ಬಲಿದಾನಗಳು ವ್ಯರ್ಥವಾಗದೇ ಸ್ವಾತಂತ್ರ್ಯಕ್ಕಾಗಿ ನಡೆದಿರುವ ವಿರೋಚಿತ ಹೋರಾಟದಲ್ಲಿ ಗೆಲವು ಶತಃಸಿದ್ಧ. ಎ. ಎನ್. ಸಿ.ಯ ಸಮರ್ಥ ನಾಯಕತ್ವದಲ್ಲಿ ದ. ಆಫ್ರಿಕೆಯ ಜನತೆ ಸ್ವಾತಂತ್ರ್ಯದ ಅಂತಿಮಗುರಿಯನ್ನು ಖಂಡಿತವಾಗಿ ಈಡೇರಿಸಿಕೊಳ್ಳುವದೆಂಬ ಆಶಯವನ್ನು ವ್ಯಕ್ತಪಡಿಸುತ್ತ ಎ.ಎನ್.ಸಿ.ಗೆ ತನ್ನ ಅಭಿನಂದನೆ ಕಳಿಸಿದೆ.

ದಕ್ಷಿಣ ಆಫ್ರಿಕಾದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ

(5ನೇ ಪುಟದಿಂದ)

ಶಸ್ತ್ರಾಗಾರ ಪಡೆದಂತಾಗಿದೆ. ಕ್ಷಿಪಣಿಗಳು, ನಾಪಾಂ ಬಾಂಬ್‌ಗಳು, ಸಬ್‌ಮೆರೀನ್‌ಗಳು, ವಿಮಾನಗಳು, ಟ್ಯಾಂಕುಗಳು ಇತ್ಯಾದಿ ಎಲ್ಲಾ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸಂಗ್ರಹ ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಬಿಳಿಯ ಫ್ಯಾಸಿಸ್ಟರು ಪಡೆದಿದ್ದಾರೆ. ಈ ಅಪಾರ ಸಂಗ್ರಹದ ಮೂಲಕ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಸದೆಬಡಿಯಲು, ಈಗಾಗಲೇ ಸ್ವತಂತ್ರವಾದ ದೇಶಗಳಿಗೆ ಕಿರುಕುಳ ಕೊಡುತ್ತಿರಲು, ಮೂರನೇ ಮಹಾಯುದ್ಧದ ಸಂದರ್ಭ ಬಂದರೆ ಸಾಮ್ರಾಜ್ಯಶಾಹಿ ಸೇನೆಗಳಿಗೆ ಜಗತ್ತಿನ ಈ ಭಾಗದಲ್ಲಿ ಸಂಪೂರ್ಣ ಸಹಾಯ ಸಿಗುವಂತಾಗಲು ಇವೆಲ್ಲದರ ಮೂಲಕ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿ ರಕ್ಷಿಸಿಕೊಳ್ಳಲು ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಬಿಳಿಯರ ಸರ್ಕಾರದಿಂದ ಬಹಳ ಉಪಯೋಗವಿದೆ. ಅಂಗೋಲಾದ ಕ್ರಾಂತಿ ಯಶಸ್ವಿಯಾದ ಮೇಲೆ ಅದನ್ನು ಮೊಳಕೆಯಲ್ಲೇ ಹಿಸುಕಿಹಾಕಲು ದಕ್ಷಿಣ ಆಫ್ರಿಕಾದ ಬಿಳಿಯ ಅಲ್ಪಸಂಖ್ಯಾತರು ಹಾಗೂ ಅವರ ಮೂಲಕ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪ್ರಯತ್ನಿಸಿ ಅಂಗೋಲಾದ ಕ್ರಾಂತಿಕಾರಿಗಳಿಂದ ಹಣ್ಣುಗಾಯಿ ನೀರುಗಾಯಿಯಾಗುವಂತೆ ಹೊಡೆಸಿಕೊಂಡದ್ದು ತೀರಾ ಇತ್ತೀಚಿನ ವರ್ಷಗಳ ಘಟನೆ.

ಪಾಶ್ಚಿಮಾತ್ಯ ದೇಶಗಳ ಬಗ್ಗೆ ಮಾತನಾಡುತ್ತಾ ಎ. ಎನ್. ಸಿ. ಯ ಅಧ್ಯಕ್ಷ ಆಲಿವರ್ ಟಾಂಬೋ ಅವರು ಹೀಗೆ ಹೇಳುತ್ತಾರೆ:

"ಹಿಂದೆ ಪಾಶ್ಚಿಮಾತ್ಯ ದೇಶಗಳು ನಾಝೀ ಜರ್ಮನಿಗೆ ಪ್ರೋತ್ಸಾಹ ಕೊಟ್ಟಂತೆ ಮತ್ತೊಮ್ಮೆ ಅದನ್ನೇ ಮಾಡುತ್ತಿದ್ದಾರೆ. ಯಾವ ಕಾರಣಕ್ಕಾಗಿ ನಾಝೀ ಜರ್ಮನಿಗೆ ಪ್ರೋತ್ಸಾಹ ಕೊಟ್ಟರೋ ಅದೇ ಕಾರಣಕ್ಕಾಗಿ ಈಗಲೂ ಅದೇ ನೀತಿಯನ್ನವಲಂಬಿಸುತ್ತಿದ್ದಾರೆ ಮತ್ತು ಅದನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ."

"ಹಿಂದೆ ಪಾಶ್ಚಿಮಾತ್ಯ ದೇಶಗಳ ಆರ್ಥಿಕ ಹಾಗೂ ಸೈನಿಕ ಪಟ್ಟಭದ್ರ ಹಿತಾಸಕ್ತಿಗಳು ನಾಝೀ ಜರ್ಮನಿಗೆ ಆರ್ಥಿಕ ಹಾಗೂ ಸೈನಿಕ ನೆರವು ಕೊಟ್ಟವು. ಈಗಲೂ ಅವೇ ಪಟ್ಟಭದ್ರ ಹಿತಾಸಕ್ತಿಗಳು ಆ ದೇಶಗಳಲ್ಲಿ ನಿರ್ಣಾಯಕ ಅಧಿಕಾರ ಪಡೆದಿವೆ. ಈ ಹಿಂದಿನಂತೆ ಈಗಲೂ ಅವರ ಕಣ್ಣು ನೆಟ್ಟಿರುವುದು ಅಪಾರ ಲಾಭಗಳಿಗೆಯ ಮೇಲೆ ಮಾತ್ರ. ಅದರ ಪರಿಣಾಮವಾಗಿ ಹಲವು ಮಾನವರು ಪಡಬೇಕಾದ ಬವಣೆಗಳು, ತೊಂದರೆಗಳೆಲ್ಲಾ ಅವರಿಗೆ ನಗಣ್ಯ. ಜನತೆ ತಮ್ಮ ದೇಶದ ಭವಿಷ್ಯವನ್ನು ತಾವೇ ನಿರ್ಧರಿಸಿ, ರೂಪಿಸಬೇಕೆಂದು ಇಟ್ಟುಕೊಂಡಿರುವ ಆಕಾಂಕ್ಷೆಗಳನ್ನು ಮೂಲಭೂತವಾಗಿಯೇ ಈ ಬಹುರಾಷ್ಟ್ರೀಯ ಸಂಸ್ಥೆಗಳು ಹಾಗೂ ಸೈನಿಕ-ಕೈಗಾರಿಕಾ ಸಂಸ್ಥೆಗಳು ಮತ್ತು ಈ ಪಾಶ್ಚಿಮಾತ್ಯ ದೇಶಗಳಲ್ಲಿ ಈ ಸಂಸ್ಥೆಗಳ ರಾಜಕೀಯ ಪ್ರತಿನಿಧಿಗಳು ವಿರೋಧಿಸುತ್ತಾರೆ. ಇವರೆಲ್ಲರಿಗೂ ಕಮ್ಯುನಿಸ್ಟ್ ವಿರೋಧದ ತೀವ್ರ ಸಾಂಕ್ರಾಮಿಕ ರೋಗ ತಗಲಿದೆ. ಆದ್ದರಿಂದ ಜನತೆ ಪ್ರಜಾಪ್ರಭುತ್ವದೆಡೆಗೆ ಮುನ್ನಡೆಯಲು ಇಡುವ ಪ್ರತಿಯೊಂದು ಹೆಜ್ಜೆಯೂ ತಮ್ಮ ಹಿತಾಸಕ್ತಿಗಳಿಗೆ ಅಡ್ಡಿಯುಂಟುಮಾಡುವ ಕಮ್ಯುನಿಸ್ಟ್ ಬೆದರಿಕೆಗಳು ಎಂದು ಅವರು ಭಾವಿಸುತ್ತಾರೆ.

"ಅರ್ಧ ಶತಮಾನದ ಹಿಂದೆ ಪ್ರತಿಕ್ರಿಯಾವಾದಿ ಶಕ್ತಿಗಳು ಜಗತ್ತಿನ ಮೇಲೆ ತಮ್ಮ ಅಧಿಕಾರ ನಡೆಸುವಲ್ಲಿ ನಾಝೀ ಜರ್ಮನಿಯನ್ನು ಅಸ್ತ್ರವನ್ನಾಗಿ ಉಪಯೋಗಿಸಿಕೊಳ್ಳುವುದಕ್ಕಾಗಿ ಆ ದೇಶವನ್ನು ಬಲಗೊಳಿಸುವ ದೊಡ್ಡ ಯೋಜನೆ ಹಾಕಿಕೊಂಡವು. ಇದರ ಪರಿಣಾಮವಾಗಿ ಜಗತ್ತಿನ ಇತಿಹಾಸದಲ್ಲೇ ಅತೀ ಅಮಾನವೀಯವಾದ ಘಟನೆ ಸಂಭವಿಸಿ ಈಗಲೂ ಜಗತ್ತಿನ ದುಡಿಯುವ ಜನತೆ ಅದರ ಕೆಟ್ಟ ಪರಿಣಾಮ ಅನುಭವಿಸುತ್ತಿದ್ದಾರೆ."

ಅದೇ ರೀತಿ ಈಗ ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಬಿಳಿಯರ ಸರಕಾರವನ್ನು ಉಪಯೋಗಿಸಿಕೊಂಡು ಆಫ್ರಿಕಾ ಖಂಡದ ದೇಶಗಳ ಜನತೆ ಸಂಪೂರ್ಣ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯದ ಕಡೆಗೆ ಮುನ್ನಡೆಯುವುದನ್ನು ತಡೆಯಲು ಯೋಚಿಸಲಾಗಿದೆ."

ಮೇಲಿನವುಗಳು ದಕ್ಷಿಣ ಆಫ್ರಿಕಾ ಮಾತ್ರವಲ್ಲ ಮೊಜಾಂಬಿಕ್, ಅಂಗೋಲಾ ಹಾಗೂ ಜಿಂಬಾಬ್ವೆಯ ಎಲ್ಲಾ ವಿಮೋಚನಾ ಹೋರಾಟಗಾರರ ಅನುಭವದ ಮಾತುಗಳು.

ಹೋರಾಟ ಮುಂದುವರಿಯುತ್ತಿದೆ

ಈ ರೀತಿ ಜಗತ್ತಿನ ಪ್ರಬಲ ಪಾಶ್ಚಿಮಾತ್ಯ ದೇಶಗಳ ಸಂಪೂರ್ಣ ಬೆಂಬಲದಿಂದಾಗಿ ದಕ್ಷಿಣ ಆಫ್ರಿಕಾದ ಬಿಳಿಯ ಅಲ್ಪಸಂಖ್ಯಾತರ ಫ್ಯಾಸಿಸ್ಟ್ ಆಡಳಿತ ಇನ್ನೂ ನಡೆಯುತ್ತಿದೆ. ಆದರೂ ಪರಿಸ್ಥಿತಿ ಈಗ ತುಂಬಾ ಬದಲಾದಂತೆ ಕಾಣುತ್ತದೆ. ಪೋರ್ಚ್‌ಗೀಸ್ ವಸಾಹತುಶಾಹಿಯ ಸಂಪೂರ್ಣ ಪರಾಭವ, ಮೊಜಾಂಬಿಕ್, ಅಂಗೋಲಾ ಹಾಗೂ ಜಿಂಬಾಬ್ವೆ ದೇಶಗಳ ಕ್ರಾಂತಿಕಾರಿ ಹೋರಾಟಕ್ಕೆ ಯಶಸ್ಸು ದೊರೆತು ಅವು ಸ್ವತಂತ್ರವಾದದ್ದು ಈ ಕ್ಷೇತ್ರದ ಬಲಾಬಲದ ಸಮೀಕರಣವನ್ನು ಬಹಳಷ್ಟು ಬದಲಿಸಿದೆ. ವಿಯೆಟ್ನಾಮಿನ ವೀರ ಜನತೆ 70ರ ದಶಕದ ಮಧ್ಯಭಾಗದಲ್ಲಿ ಸಾಮ್ರಾಜ್ಯಶಾಹಿಗಳಿಗೆ ಕಲಿಸಿದ ಪಾಠ ಇನ್ನೂ ಹಸಿರಾಗಿಯೇ ಇದೆ.

ಸೊವೆಟೋದಿಂದ ಆರಂಭಿಸಿದ ದಕ್ಷಿಣ ಆಫ್ರಿಕಾದ ಯುವ ಕ್ರಾಂತಿಕಾರಿಗಳು ಸೊಲೋಮನ್ ಮಹಾಲಂಗುವಿನಂತಹ ಹಲವಾರು ಎಳೆಯ ಜೀವಗಳ ಬಲಿದಾನದಿಂದ ಮತ್ತಷ್ಟು ಉತ್ತೇಜಿತರಾಗಿ ಎ.ಎನ್.ಸಿ. ಯ ಸಶಸ್ತ್ರ ವಿಮೋಚನಾ ಸೇನೆಯನ್ನು ಬಲಗೊಳಿಸುತ್ತಿದ್ದಾರೆ. ಬಹುರಾಷ್ಟ್ರೀಯ ಸಂಸ್ಥೆಗಳ, ಮಿಲಿಟರಿ ಕೈಗಾರಿಕಾ ಸಂಸ್ಥೆಗಳ ಹಾಗೂ ಬಿಳಿಯ ಅಲ್ಪಸಂಖ್ಯಾತರ ಶೋಷಣಾ ವ್ಯವಸ್ಥೆಯ ಮುಖ್ಯ ಪ್ರತೀಕಗಳಂತಿರುವ ಕೈಗಾರಿಕಾ ಸ್ಥಾವರಗಳ ಮೇಲೆ ಅತ್ಯಂತ ದಕ್ಷತೆಯಿಂದ, ಚಾಲಾಕಿನಿಂದ ಯಶಸ್ವೀ ದಾಳಿ ನಡೆಸುತ್ತಿದ್ದಾರೆ. ಇತ್ತೀಚೆಗೆ ಕಲ್ಲಿದ್ದಲಿನಿಂದ ತೈಲ ಉತ್ಪಾದಿಸುವ ಕೈಗಾರಿಕಾ ಯಂತ್ರಸ್ಥಾವರದ ಮೇಲೆ ವಿಮೋಚನಾ ಸೇನೆ ನಡೆಸಿದ ದಾಳಿ ಅಲ್ಪಸಂಖ್ಯಾತ ಬಿಳಿಯರ ಸರಕಾರವನ್ನು ಅವರ ಅಂತರಾಷ್ಟ್ರೀಯ ಬೆಂಬಲಿಗರನ್ನು ಸಂಪೂರ್ಣವಾಗಿ ನಡುಗಿಸಿಬಿಟ್ಟಿದೆ. "ಆಫ್ರಿಕನ್ನರು ತೀರಾ ಮಂದಮತಿಗಳು" ಎಂಬ ಅವರ ವರ್ಣದ್ವೇಷದ ಭ್ರಮೆ ಹರಿಯಲಾರಂಭಿಸಿದೆ. ಇದರ ಜತೆಗೆ ದೇಶಾದ್ಯಂತ ಕೆಲವು ವಸ್ತುಗಳ ಬಹಿಷ್ಕಾರ ನಡೆದಿದೆ. ಬಿಳಿಯ ಸರ್ಕಾರದ ಬಸ್ಸುಗಳು ಖಾಲಿಯಾಗಿಯೇ ಸಂಚರಿಸುತ್ತವೆ; ಕೆಲವೊಮ್ಮೆ ಸಂಚರಿಸುವುದೇ ಇಲ್ಲ. ವಿದ್ಯಾರ್ಥಿಗಳು ತಮ್ಮ ತರಗತಿಗಳಿಗೆ ಬಹಿಷ್ಕಾರ ಹಾಕಿ ಆ ಖಾಲಿ ತರಗತಿಗಳ ಹೊರಗೆ ಒಂದು ಬದಲೀ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪೆನಿಗಳ ಕೈಯಲ್ಲಿರುವ ಮೋಟಾರು ಕೈಗಾರಿಕೆಯ ಕಾರ್ಮಿಕ ಮುಷ್ಕರಗಳಿಂದಾಗಿ ಆ ಕೈಗಾರಿಕೆಯಲ್ಲಿ ಮಾತ್ರವಲ್ಲ ಅದಕ್ಕೆ ಸಂಬಂಧಪಟ್ಟ ಇನ್ನೂ ಹಲವಾರು ಕೈಗಾರಿಕಾ ವಲಯಗಳಲ್ಲಿ ಆರ್ಥಿಕ ಚಟುವಟಿಕೆ ಸ್ತಬ್ಧವಾಗುತ್ತಿದೆ. ವಿಮೋಚನಾ ಹೋರಾಟ ತೀವ್ರವಾಗುತ್ತಿದೆ. ಆದರೆ ಈ ಲೇಖನದಲ್ಲಿ ಹಿಂದೆ ಹೇಳಿದ ಕಾರಣಗಳಿಂದಾಗಿ ಹೋರಾಟ ಇನ್ನೂ ದುರ್ಗಮವಾದ ಹಾದಿಯಲ್ಲಿ ಮುನ್ನಡೆಯಬೇಕಾಗಿದೆ. ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದ ಯಶಸ್ಸು ಆಫ್ರಿಕಾ ಖಂಡದ ರಾಷ್ಟ್ರೀಯ ಸ್ವಾತಂತ್ರ್ಯದ ಒಂದು ಮಹತ್ವದ ಘಟ್ಟವಾಗಲಿದೆ: ಆಫ್ರಿಕನ್ ಸಮಾಜಗಳು ರಾಷ್ಟ್ರೀಯ ಸ್ವಾತಂತ್ರ್ಯದಿಂದ ಸಮಾನತೆಯ ಸಮಾಜ ನಿರ್ಮಾಣದ ಕಡೆಗೆ ಮುನ್ನಡೆಯುವ ಹೊಸ ಘಟ್ಟವಾಗಲಿದೆ. ಮಾತ್ರವಲ್ಲ ಜಗತ್ತಿನ ಜನರ ಶಾಂತಿ, ಸುಖ, ನೆಮ್ಮದಿಯನ್ನು ಕೆಡಿಸುತ್ತಿರುವ ಸಾಮ್ರಾಜ್ಯಶಾಹಿಗಳಿಗೆ ವಿಯೆಟ್ನಾಮಿನ ನಂತರ ಇನ್ನೊಂದು ದೊಡ್ಡ ಪೆಟ್ಟನ್ನೀಯುವ ಚಾರಿತ್ರಿಕ ಘಟನೆಯಾಗಲಿದೆ.

—ಕೆ. ವೇದ್

(ಮುಗಿಯಿತು)

ಜನವರಿ ೨೧ ರಂದು ಚಿಂತಾಮಣಿಯಲ್ಲಿ ನಡೆದದ್ದೇನು?

ಜನವರಿ 21 ರಂದು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ವಿದ್ಯಾರ್ಥಿ ಪ್ರದರ್ಶನಕಾರರ ಮೇಲೆ ಗೋಲಿಬಾರ್ ನಡೆದುದರ ಬಗ್ಗೆ 22 ರಂದು ಎಸ್.ಎಫ್.ಐ. ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಆರಾಧ್ಯ ಮತ್ತು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯ ಸಂಚಾಲಕ ಜಿ. ವಿ. ಶ್ರೀರಾಮ ರೆಡ್ಡಿಯವರು ಮತ್ತು ಬೆಂಗಳೂರು ಜಿಲ್ಲಾ ರೈತ ಮುಖಂಡರಾದ ಆರ್. ಮನೋಹರ್‌ರವರು ಸ್ಥಳಕ್ಕೆ ಭೇಟಿ ನೀಡಿ ಮೃತರ ಕುಟುಂಬದವರು, ವಿದ್ಯಾರ್ಥಿ ಮುಖಂಡರು ಮತ್ತು ಪ್ರತ್ಯಕ್ಷದರ್ಶಿಗಳ ಸಂಗಡ ಪರಿಶೀಲನೆ ನಡೆಸಿ ಈ ಕೆಳಕಂಡ ಹೇಳಿಕೆಯನ್ನು ನೀಡಿದ್ದಾರೆ.

"ಜನವರಿ 20ರಂದು ಕೋಲಾರದಲ್ಲಿ ಪೋಲೀಸರು ವಿದ್ಯಾರ್ಥಿಗಳ ಮೇಲೆ ನಡೆಸಿದ ಅಮಾನುಷ ದೌರ್ಜನ್ಯದಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳು ಈ ದೌರ್ಜನ್ಯವನ್ನು ಪ್ರತಿಭಟಿಸಿ ಮತ್ತು ಬಸ್ ದರ ಏರಿಕೆಯನ್ನು ವಿರೋಧಿಸಿ 21ರಂದು ಚಿಂತಾಮಣಿಯಲ್ಲಿ ವಿದ್ಯಾರ್ಥಿಗಳು ಪ್ರದರ್ಶನ ನಡೆಸುವ ತಯಾರಿಕೆಯಲ್ಲಿದ್ದರು. ಕಾಲೇಜು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಹೊರಬಂದು ಸಾಲಾಗಿ ನಿಲ್ಲುತ್ತಿದ್ದರು. ಈ ಸಮಯದಲ್ಲಿ ಕಲ್ಲು ತೂರಿದರೆಂಬ ಆಪಾದನೆ ಮೇಲೆ ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜು ಮಾಡಲಾಯಿತು. ಶಾಲಾ ವಿದ್ಯಾರ್ಥಿಗಳನ್ನು ಅಟ್ಟಿಕೊಂಡು ಬಂದ ಪೋಲೀಸರು ಪಾಲಿಟೆಕ್ನಿಕ್ ಕಾಲೇಜಿನ ಬಳಿ ವಿಪರೀತ ಅಶ್ರುವಾಯು ಪ್ರಯೋಗ ಮಾಡಿದರು. ವಿದ್ಯಾರ್ಥಿಗಳು ಮೂರು ಗುಂಪಾಗಿ ಚೆದುರಿದರು. ಇದರೊಡನೆ ಸಾರ್ವಜನಿಕರೂ ಸೇರಿದರು. ಒಂದು ಗುಂಪಿನ ಮೇಲೆ ಸ್ಟೇಟ್ ಬ್ಯಾಂಕ್ ಬಳಿ ಪೋಲೀಸರು ಅನವಶ್ಯಕವಾಗಿ ಗೋಲಿಬಾರ್ ಮಾಡಿದಾಗ ಇಬ್ಬರು ಸ್ಥಳದಲ್ಲೇ ಮೃತಪಟ್ಟರೆಂದೂ ಒಬ್ಬನಿಗೆ ತೋಳಿನಲ್ಲಿ ಗುಂಡು ತಾಗಿ ತೀವ್ರ ಗಾಯವಾಯಿತೆಂದೂ ಪ್ರತ್ಯಕ್ಷದರ್ಶಿಗಳು ತಿಳಿಸಿದರು. ಗಾಯಗೊಂಡವನು ಸ್ವಲ್ಪ ಎದ್ದು ನಂತರ ಕುಸಿದು ಬಿದ್ದನೆಂದೂ ಆತನಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ದೊರಕಿಸಲು ಪೋಲೀಸರು ನಿರಾಕರಿಸಿ ನಂಗಲಿ ಆಸ್ಪತ್ರೆಗೆ (ಮುಳುಬಾಗಿಲು ತಾಲ್ಲೂಕು) ಪೋಲೀಸ್ ವ್ಯಾನಿನಲ್ಲಿ ತುರುಕಿಕೊಂಡು ಹೋದಾಗ ಆಸ್ಪತ್ರೆ ಸೇರುವ ವೇಳೆಗೆ ಮೃತಪಟ್ಟನೆಂದೂ ತಿಳಿದು ಬಂದಿದೆ. ಕೆಲವು ಸಮಾಜಘಾತುಕ ಶಕ್ತಿಗಳು ಉಳಿದೆರಡು ಗುಂಪುಗಳೊಡನೆ ಸೇರಿಕೊಂಡು ಕೆ.ಎಸ್.ಆರ್.ಟಿ.ಸಿ.ಬಸ್ಸೊಂದಕ್ಕೆ ಮತ್ತು ರೈಲು ಬೋಗಿಯೊಂದಕ್ಕೆ ಬೆಂಕಿ ಹೊತ್ತಿಸಿದರೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು. ರೈಲ್ವೆ ನಿಲ್ದಾಣದಲ್ಲಿ ಗೋಲಿಬಾರ್ ಮಾಡಲಾಯಿತೆಂಬ ಪೋಲೀಸ್ ಸುದ್ದಿಯು ಶುದ್ಧ ಸುಳ್ಳೆಂದೂ ಸ್ಟೇಟ್‌ಬ್ಯಾಂಕ್ ಬಳಿ ಮಾತ್ರ ಗೋಲಿಬಾರ್ ಮಾಡಲಾಯಿತೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು. ವಿದ್ಯಾರ್ಥಿಗಳ ರೂಮುಗಳಿಗೆ ಪೋಲೀಸರು ದಾಳಿ ನಡೆಸಿ ಲಾಠಿಯಿಂದ ಥಳಿಸಿದರೆಂದೂ ವಿದ್ಯಾರ್ಥಿ ಮುಖಂಡರು ತಿಳಿಸಿದರು. ರೂಮುಗಳಲ್ಲಿ ರಕ್ತದ ಕಲೆಗಳನ್ನು ಸಹ ನೋಡಬಹುದಿತ್ತು. ಸುಮಾರು 70 ಮಂದಿಯನ್ನು ಬಂಧಿಸಿ (ಶಾಲಾ ಮಕ್ಕಳೂ ಸೇರಿದಂತೆ) ಲಾಕಪ್ಪಿನಲ್ಲಿ ಪುನಃ ಅಮಾನುಷವಾಗಿ ಥಳಿಸಲಾಗಿದೆ. ಬಹಳಷ್ಟು ಮಂದಿಗೆ ಗಾಯಗಳಾಗಿದ್ದು ಆನಂದ ಎಂಬ ವಿದ್ಯಾರ್ಥಿಗೆ ತೀವ್ರ ಗಾಯಗಳಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ."

ಈ ಪರಿಶೀಲನೆಯ ನಂತರ ಬಸ್ ಅಥವಾ ರೈಲಿಗೆ ಬೆಂಕಿ ಇಟ್ಟ ಸ್ಥಳದಲ್ಲಿ ಗೋಲಿಬಾರ್ ಆಗಿರದೆ ಮತ್ತೊಂದು ಸ್ಥಳದಲ್ಲಿ ಗೋಲಿಬಾರ್ ನಡೆದಿರುವುದು ಸ್ಪಷ್ಟವಾಗಿದೆ. ಇದರಿಂದ ಪೋಲೀಸರು ದರ್ಪ ಪ್ರದರ್ಶನ ಮಾಡಲು ಅನಗತ್ಯವಾಗಿ ಗೋಲಿಬಾರ್ ಮಾಡಿ 12 ವರ್ಷದ ಇಬ್ಬರು ಹಸುಳೆಗಳೂ ಸೇರಿದಂತೆ ಮೂವರನ್ನು ಬಲಿ ತೆಗೆದುಕೊಂಡಿದ್ದಾರೆ."

"ಪೋಲೀಸರ ಅಮಾನುಷ ದೌರ್ಜನ್ಯಕ್ಕೆ ಬಲಿಯಾದ ಎಂ. ನರಸಿಂಹಯ್ಯ 22 ವರ್ಷದ ಹರೆಯದ ಯುವಕ ಬ್ಯಾಂಕಿಗೆ ಹಣ ಕಟ್ಟಲು ಹೋಗುತ್ತಿದ್ದಾಗ ಗುಂಡಿಗೆ ಬಲಿಯಾದ. ಈತ ಕೆಲವೇ ತಿಂಗಳ ಹಿಂದೆಯಷ್ಟೇ ವಿವಾಹವಾಗಿದ್ದನು. ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ ಪರೀಕ್ಷೆಯ ಅಭ್ಯರ್ಥಿಯೂ ಹೌದು. 13 ವರ್ಷದ ಹಸುಳೆ ಸಯ್ಯದ್ ಅಲ್ತಾಫ್ ಪಾಷಾ ತನ್ನ ಕುಟುಂಬದ ಬಡತನದಿಂದ 6 ತಿಂಗಳ ಹಿಂದೆಯಷ್ಟೇ ಮಾಧ್ಯಮಿಕ ಶಾಲೆಯನ್ನು ತೊರೆದಿದ್ದನು. ಇನ್ನೊಬ್ಬ ಹಸುಳೆ 12ವರ್ಷದ ಲಕ್ಷ್ಮೀ ನಾರಾಯಣ."

"ಎಸ್.ಎಫ್.ಐ. ರಾಜ್ಯಸಮಿತಿಯು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದು, ಮೃತರ ಕುಟುಂಬಗಳಿಗೆ ತಲಾ 25 ಸಾವಿರ ರೂ. ಪರಿಹಾರ ನೀಡಬೇಕೆಂದೂ, ಚಿಂತಾಮಣಿ ಮತ್ತು ಕೋಲಾರದ ಅಹಿತಕರ ಘಟನೆಗಳಿಗೆ ಕಾರಣರಾದ ಪೋಲೀಸ್ ಅಧಿಕಾರಿಗಳನ್ನು ತಕ್ಷಣ ವಜಾ ಮಾಡಬೇಕೆಂದೂ ಮತ್ತು ಪ್ರಕರಣದ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರೊಬ್ಬರಿಂದ ನ್ಯಾಯಾಂಗ ತಳಿಖೆ ನಡೆಸಬೇಕೆಂದೂ ಒತ್ತಾಯ ಮಾಡುತ್ತದೆ. ಇಲ್ಲವಾದಲ್ಲಿ ರಾಜ್ಯಾದ್ಯಂತ ತೀವ್ರ ಚಳುವಳಿ ನಡೆಸುವುದು ಅನಿವಾರ್ಯ."

—ಎಸ್. ಆರ್. ಆರಾಧ್ಯ

ಜನವರಿ ೨೬

ಹೊಸ ಭಾರತ ನಿರ್ಮಾಣಕ್ಕೆ ದೀಕ್ಷೆ ತೊಡುವ ದಿನ

ಜನವರಿ 26, 1950ರಂದು ಭಾರತವನ್ನು ಗಣರಾಜ್ಯವೆಂದು ಘೋಷಿಸಲಾಯಿತು. ಆದರೆ ಈ ದಿನಕ್ಕೆ ಇನ್ನೂ ಹಿಂದಿನ ಚರಿತ್ರೆ ಇದೆ. 1930ರ ಇದೇ ದಿನದಂದು ಇಡೀ ದೇಶವು ಸಂಪೂರ್ಣ ಸ್ವತಂತ್ರವಾಗಬೇಕೆಂಬ ಬೇಡಿಕೆಯ ದಿನವನ್ನು ಆಚರಿಸಲಾಯಿತು. ಎರಡು ದಶಕಗಳಿಂದ ಈ ದಿನವನ್ನು ಸ್ವಾತಂತ್ರ್ಯದ ದಿನವನ್ನಾಗಿ ಆಚರಿಸಲಾಯಿತು. ಗಣರಾಜ್ಯವೆಂಬ ಗೌರವವನ್ನು ಪಡೆಯುವ ದಿನಕ್ಕಿಂತ ಬಹಳ ಹಿಂದಿನಿಂದಲೇ ಈ ದಿನ ಅಸೀಮತ್ಯಾಗ-ಬಲಿದಾನಗಳ, ಜಾಗೃತ ದೇಶದ ಸಂಕೇತವಾಗಿತ್ತು.

ಆದರೆ ಅರ್ಧಶತಮಾನದಿಂದಲೂ ಕನಸಾಗಿರುವ ನಿಜವಾದ ಸ್ವಾತಂತ್ರ್ಯ ನನಸಾಗಿದೆಯೇ? ರಾಜಕೀಯ ಸ್ವಾತಂತ್ರ್ಯ ದೊರೆತು ಮೂರು ದಶಕಗಳೇ ಕಳೆದಿದ್ದರೂ ತುಳಿತಕ್ಕೆ ಒಳಗಾದ ಜನತೆಯ ಹಕ್ಕುಗಳನ್ನು ಪೂರ್ತಿಯಾಗಿ ರಕ್ಷಿಸಲಾಗಿದೆಯೇ? ಅಥವಾ ಹಕ್ಕನ್ನು ನೀಡಲಾಗಿದೆಯೇ? ಅಥವಾ ನಮ್ಮ ಸಂವಿಧಾನದಲ್ಲಿ ಅವಕಾಶವಿರುವ ಸೀಮಿತ ಹಕ್ಕುಗಳು ಜನಸಾಮಾನ್ಯನ ಬದುಕಿಗೆ ಎಷ್ಟರಮಟ್ಟಿಗೆ ಪ್ರಯೋಜನವಾಗಿವೆ?

ಸಂವಿಧಾನದಲ್ಲಿ ಘೋಷಿಸಲಾಗಿರುವ ಮತ್ತು ವಿವರಿಸಲಾಗಿರುವ ರೀತಿಯಲ್ಲಿ ನಮ್ಮ ರಾಷ್ಟ್ರವು ವಿಭಿನ್ನ ಸಂಸ್ಕೃತಿ ಮತ್ತು ವಿಭಿನ್ನ ಭಾಷಾ ಪದ್ಧತಿಯಿಂದ ಕೂಡಿದ ರಾಜ್ಯಗಳ ಒಕ್ಕೂಟವೆಂಬುದನ್ನು ಇಲ್ಲಿ ನಾವು ಸ್ಮರಿಸಬಹುದಾಗಿದೆ. ಆದರೆ ದುರದೃಷ್ಟವಶಾತ್ ಈ 30 ವರ್ಷಗಳಲ್ಲಿ ನಮ್ಮ ಸಂವಿಧಾನವನ್ನು ಸುಮಾರು 40 ಕ್ಕಿಂತಲೂ ಹೆಚ್ಚು ಸಲ ತಿದ್ದುಪಡಿಮಾಡಿ ಸಂವಿಧಾನದ ಮೂಲಸ್ವರೂಪವನ್ನೇ ಹಾಳುಗೆಡವಲಾಗಿದೆ. ಇದರಿಂದಾಗಿ ಇಂದು ರಾಜ್ಯಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಜಾತ್ಯಾತೀತ ಎಂದು ಹೇಳಿಕೊಳ್ಳುತ್ತಿರುವ ದೇಶವು ಇಂದು ಕೋಮುಗಲಭೆಗಳಿಂದ ಜರ್ಜರಿತವಾಗಿದೆ ಮತ್ತು ರಾಷ್ಟ್ರೀಯ ಐಕ್ಯತೆಯು ನುಚ್ಚುನೂರಾಗುವ ಪರಿಸ್ಥಿತಿ ಒದಗಿದೆ. ಸರ್ವಾಧಿಕಾರವು ಮತ್ತೊಮ್ಮೆ ತನ್ನ ಕ್ರೂರಸ್ವರೂಪ ತಾಳಿ ತಲೆಎತ್ತುವ ಲಕ್ಷಣ ಕಂಡುಬಂದಿದೆ. ಜನತೆಗೆ ಸಂವಿಧಾನಾತ್ಮಕವಾಗಿ ನೀಡಿರುವ ಪ್ರಜಾಪ್ರಭುತ್ವ ಹಕ್ಕುಗಳಿಗೆ ಚ್ಯುತಿಬರುವ ಸಂಭವ ಉಂಟಾಗಿದೆ.

ಹಿಂದಿನ ಅನೇಕ ವರ್ಷಗಳಿಂದ ಹದಗೆಟ್ಟ ಆಡಳಿತದ ಪರಿಣಾಮವಾಗಿ, ಮತ್ತು ಉದಾಸೀನದಿಂದಾಗಿ ಕಳೆದುಕೊಂಡಿದ್ದ ತನ್ನ ರಾಜಕೀಯ ಗೌರವವನ್ನು ಪಶ್ಚಿಮ ಬಂಗಾಳವು ಮತ್ತೆ ಉಳಿಸಿಕೊಂಡು ಜನತೆಯ ಮಧ್ಯೆ ವಿಶ್ವಾಸವನ್ನು ಮೂಡಿಸಿದೆ. ಉಸಿರುಕಟ್ಟುವ ವಾತಾವರಣದಿಂದ ಬಿಡುಗಡೆಯಾಗಿ ಹೊಸ ಚೇತನ ಉಂಟುಮಾಡಲಾಗಿದೆ. ಹಳ್ಳಿಗಾಡಿನ ಮತ್ತು ಪಟ್ಟಣದ ದಂಡಿಯುವ ಜನತೆಯ ಮಧ್ಯೆ ಹೊಸ ಆಶಾಕಿರಣ ಮೂಡಿದೆ. ಕಳೆದ 3 ವರ್ಷಗಳಿಂದ ಹೊಸ ಬದುಕಿನ, ಸ್ವಾತಂತ್ರ್ಯದ, ಪ್ರಜಾಪ್ರಭುತ್ವ ಮತ್ತು ಶೋಷಣೆಯನ್ನು ಕೊನೆಗೊಳಿಸುವ ಕನಸು ಕಾಣಲಾಗುತ್ತಿದೆ. ಜನತೆಯ ಮಾತು ಮತ್ತು ಕೃತಿಗಳೇ ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಜನತೆಯ ತೀರ್ಪೇ ಅಂತಿಮ ತೀರ್ಪು.

ಪಶ್ಚಿಮ ಬಂಗಾಳ ಸರಕಾರ

ವಿದ್ಯಾಭ್ಯಾಸದ ವ್ಯಾಪಾರೀಕರಣ ತಡೆಗಟ್ಟಲು ವಿದ್ಯಾರ್ಥಿ ಸಮುದಾಯ ಸಿಡಿದೇಳಲಿ

(3ನೇ ಪುಟದಿಂದ)

ವಾದ. ಹೌದು ನಿಜ. ಅಮೇರಿಕ ದಂತಹ ಹಳ್ಳಿಗಳಿಗೆ ಇನ್ನೂ ಹೆಚ್ಚಿನ ಸೇವೆ ಮಾಡಬಹುದು. ಹಾಗಾದರೆ ನಮ್ಮ ಹಳ್ಳಿಗಳಿಗೇಕೆ ಕೆಲವು ವೈದ್ಯರು ಬರುವುದಿಲ್ಲವೆನ್ನುತ್ತಾರೆ. ಇದಕ್ಕೆ ಕಾರಣಗಳು ಹಲವಾರು. ಹಳ್ಳಿಗಳಲ್ಲಿನ ವೈದ್ಯರುಗಳಿಗೆ ಅಗತ್ಯ ಸೌಲಭ್ಯಗಳಿಲ್ಲ. ಇನ್ನು ಲಂಚಾವತಾರ. ಮತ್ತು ಸರ್ಕಾರಿ ಹುದ್ದೆಗೆ ಹಣ ಸುರಿಯಬೇಕು. ನೌಕರಿ ಪಡೆದ ಮೇಲೆ ತಾನು ಹಾಕಿದ ಬಂಡವಾಳ ಬಡ್ಡಿ ಸಮೇತ ಬರಬೇಕು. ಸರ್ಕಾರದ ಪಗಾರದಿಂದ ಇದು ಸಾಧ್ಯವೇ? ನಗರಗಳಲ್ಲೇ ಲೂಟಿಗೆ ಹೆಚ್ಚು ಅವಕಾಶ. ಇನ್ನು ಖಾಸಗಿ ವೈದ್ಯರಿಗೆ ಪೇಟೆ-ಪಟ್ಟಣಗಳ ಮಾರುಕಟ್ಟೆಯಲ್ಲೇ ಹೆಚ್ಚು ಬೇಡಿಕೆಯಿರುವುದೆಂದು ಗೊತ್ತು. ಇದನ್ನೆಲ್ಲಾ ಸರಿಪಡಿಸಲು ಲಾಭಕೋರ ವ್ಯವಸ್ಥೆಯ ಈ ಸರ್ಕಾರಕ್ಕೆಲ್ಲಿ ಸಾಧ್ಯವಾಗಬೇಕು.

ಈ ಅನ್ಯಾಯ-ಸುಲಿಗೆಯ ವಿರುದ್ಧ ವೈದ್ಯಕೀಯ ವಿದ್ಯಾರ್ಥಿಗಳು ಬಂಡೆದ್ದಿದ್ದಾರೆ. ಈ ಹೋರಾಟ ಹೆಚ್ಚು ಮೆಡಿಕಲ್ ಕಾಲೇಜುಗಳ ವಿರುದ್ಧ ತಮ್ಮ ಸ್ವಾರ್ಥಕ್ಕಾಗಿ ನಡೆಸುವ ಹೋರಾಟವೆಂದೂ, ಉಚ್ಚ ಜಾತಿಯವರ ಕುತಂತ್ರವೆಂದೂ ಅಪಪ್ರಚಾರಕ್ಕೊಳಗಾಗಿದೆ. ಮೆಡಿಕಲ್ ಕಾಲೇಜುಗಳ ಪ್ರಾರಂಭದಿಂದ ನಿರುದ್ಯೋಗ ಸಮಸ್ಯೆ ಮತ್ತು ಪೈಪೋಟಿ ಹೆಚ್ಚುವುದೆಂದು ಹೊಸ ಮೆಡಿಕಲ್ ಕಾಲೇಜುಗಳನ್ನು ವಿರೋಧಿಸುವುದು ಬಾಲಿಶ ವರ್ತನೆ. ನಿರುದ್ಯೋಗಿ ವೈದ್ಯ ಪದವೀಧರರಿಗೆ ಉದ್ಯೋಗದ ಅವಕಾಶ ಹೆಚ್ಚಿಸಬೇಕೆಂದು ಇದಕ್ಕಾಗಿ ಸರ್ಕಾರವು ಹೆಚ್ಚು ಆಸ್ಪತ್ರೆಗಳನ್ನು ತೆರೆಯಬೇಕೆಂದು ಹೋರಾಡುವುದು ಸರಿಯಾದ ದಾರಿ. ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವವರಿಗೆ ವಿಶೇಷ ಪ್ರೋತ್ಸಾಹ ನೀಡಬೇಕು, ನಿರುದ್ಯೋಗಿ ಪರಿಹಾರ ನೀಡಬೇಕೆಂಬುದು ಸೂಕ್ತ ಬೇಡಿಕೆ. ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳ ಪ್ರಯತ್ನದಿಂದ ವೈದ್ಯಕೀಯ ವಿದ್ಯಾರ್ಥಿಗಳ ಸಂಘ ಈ ಬಗ್ಗೆ ಸ್ಪಷ್ಟವಾದ ನಿಲುವು ತಳೆದಿದೆ. ಖಾಸಗಿ ಮೆಡಿಕಲ್ ಕಾಲೇಜುಗಳ ರಾಷ್ಟ್ರೀಕರಣವಾಗಬೇಕು, ಕ್ಯಾಪಿಟೇಶನ್ ಶುಲ್ಕ ಸಂಪೂರ್ಣ ರದ್ದಾಗಬೇಕು, ಮೆಡಿಕಲ್ ಕಾಲೇಜುಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು, ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಬೇಕು, ಶಿಕ್ಷಣವನ್ನು ಮತೀಯ ಸಂಸ್ಥೆಗಳಿಂದ ದೂರವಿಡಬೇಕೆಂದು ವೈದ್ಯಕೀಯ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳು. ಈ ಹೋರಾಟಕ್ಕೆ ಎಲ್ಲ ವಿದ್ಯಾರ್ಥಿಗಳ ಬೆಂಬಲ ಅಗತ್ಯ.

ವೈದ್ಯಕೀಯ ವಿದ್ಯಾರ್ಥಿಗಳ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ಮತ್ತು ವಿಸ್ತರಿಸಲು ಜನವರಿ 3 ರಂದು ಬೆಂಗಳೂರಿನಲ್ಲಿ ಎಸ್.ಎಫ್.ಐ., ಎ.ಐ.ಎಸ್.ಎಫ್., ಎ.ಐ.ಡಿ.ಎಸ್.ಓ., ಎ.ಬಿ.ವಿ.ಪಿ., ಯುವಜನತಾ ಸಂಘಟನೆಗಳೂ ಸೇರಿದಂತೆ 'ಕರ್ನಾಟಕ ವಿದ್ಯಾರ್ಥಿಗಳ ಮತ್ತು ಕಿರಿಯ ವೈದ್ಯರ ಸಮನ್ವಯ ಸಮಿತಿ'ಯನ್ನು (Karnataka Students and Junior Doctors Co-ordination Committee) ರಚಿಸಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳ ಈ ಚಾರಿತ್ರಿಕ ಹೋರಾಟವನ್ನು ಸಕ್ರಿಯವಾಗಿ ಬೆಂಬಲಿಸಲು ಸಮನ್ವಯ ಸಮಿತಿಯು ರಾಜ್ಯದ ವಿದ್ಯಾರ್ಥಿಗಳಿಗೆ ಕರೆ ನೀಡಿದೆ.

ವಿದ್ಯಾಭ್ಯಾಸದ ವ್ಯಾಪಾರೀಕರಣವನ್ನು ನಿಲ್ಲಿಸಲು, ಮಠ, ಮಸೀದಿ-ಚರ್ಚುಗಳಿಂದ ಶಿಕ್ಷಣವನ್ನು ದೂರವಿಡಲು ಕರ್ನಾಟಕದ ವಿದ್ಯಾರ್ಥಿ ಸಮುದಾಯ ಸಿಡಿದೇಳಲಿ!

ಫೆಬ್ರವರಿ ೫ ರಂದು ವಿಧಾನಸೌಧ ಚಲೋ

(ಒಂದನೇ ಪುಟದಿಂದ)

ದಲ್ಲಿ ನರಗುಂದ ಜಾಥಾವನ್ನು ಸೇರಲಿದೆ. ಚಿಕ್ಕಮಗಳೂರು, ಭದ್ರಾವತಿ ಕಡೆಯಿಂದ ಹೊರಟಿರುವವರು ನರಗುಂದ ಜಾಥಾವನ್ನು ತುಮಕೂರಲ್ಲಿ ಸೇರಲಿದ್ದಾರೆ. ಕೋಮು ಗಲಭೆಯ ಕಾರಣದಿಂದ ಶಿವಮೊಗ್ಗ ನಗರದಿಂದ ಜಾಥಾ ಹೊರಡಿಸುವುದನ್ನು ರದ್ದು ಮಾಡಬೇಕಾಗಿ ಬಂದಿದೆ. ಕೊಡಗು ಜಿಲ್ಲೆಯಿಂದ ರೈತ-ಕೂಲಿಗಾರರು ಹೊರಟು ಫೆ. 5 ರಂದು ಬೆಂಗಳೂರಿಗೆ ಬರಲು ತೀರ್ಮಾನಿಸಿದ್ದಾರೆ. ಮಂಗಳೂರಿನಿಂದ ನೂರಾರು ಮಂದಿ ಫೆ. 5 ರಂದು ಬೆಂಗಳೂರು ತಲಪುವರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಪ್ರತಿನಿಧಿಸಲ್ಪಟ್ಟ ರೈತಜಾಥಾಗಳು ಫೆ. 4ರ ಸಂಜೆ ಬೆಂಗಳೂರು ನಗರದ ಹೊರವಲಯಗಳಲ್ಲಿ ಬೀಡು ಬಿಟ್ಟು, ಫೆ. 5ರ ಬೆಳಿಗ್ಗೆ ನಗರದ ಕಾರ್ಮಿಕರು, ವಿದ್ಯಾರ್ಥಿ ಯುವಜನತೆ, ಬುದ್ಧಿಜೀವಿಗಳು ಮತ್ತು ಮಹಿಳೆಯರೊಂದಿಗೆ ಸೇರಿ ವಿಧಾನಸೌಧದೆಡೆಗೆ ಬೃಹತ್ ಮತಪ್ರದರ್ಶನ ನಡೆಸಲಿವೆ. ನಾಲ್ಕೂ ಕಡೆಯಿಂದ ಬರುವ ಜಾಥಾಗಳು ನಗರದ ಸುಭಾಷ್‌ನಗರ ಮೈದಾನದಲ್ಲಿರುವ ರೈತ ಕಾರ್ಮಿಕ ಹೋರಾಟ ಸಮಿತಿಯ ಆವರಣದಲ್ಲಿ ಬಂದು ಸೇರಿ ವಿಧಾನಸೌಧದತ್ತ ಸಾಗಲಿವೆ. ಫೆ. 5ರಂದಿನ ಕಾರ್ಯಕ್ರಮದಲ್ಲಿ ರೈತ, ಕಾರ್ಮಿಕ, ವಿದ್ಯಾರ್ಥಿ, ಯುವಜನತೆ ಮತ್ತು ಬುದ್ಧಿಜೀವಿಗಳು ಭಾರಿ ಸಂಖ್ಯೆಯಲ್ಲಿ ಸೇರುವಂತೆ ರಾಜ್ಯದ ಎಲ್ಲಾ ಕಡೆಗಳಲ್ಲೂ ಶ್ರಮಿಸಲು ನಾಲ್ಕೂ ಪಕ್ಷಗಳ "ರೈತ-ಕಾರ್ಮಿಕ ಹೋರಾಟ ಸಮಿತಿ" ಕರೆ ಇತ್ತಿದೆ. ●

ಕಂಪೂಚಿಯಾಕ್ಕೆ ಅಭಿನಂದನೆ

ಪೊಲ್‌ಪೋಟ್ ದುರಾಡಳಿತದಿಂದ ವಿಮೋಚನೆಗೊಂಡ 2ನೇ ವಾರ್ಷಿಕೋತ್ಸವದ ಸುಸಂದರ್ಭದಲ್ಲಿ, ಕಂಪೂಚಿಯಾದ ಜನತೆಗೆ ಮತ್ತು ಕಾಂ. ಹೆಂಗ್‌ಸಮರಿನ್‌ರ ನೇತೃತ್ವದ ಜನತಾ ಕ್ರಾಂತೀಕಾರಿ ಕೌನ್ಸಿಲ್‌ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಕ್ರಾಂತಿಕಾರೀ ಶುಭಾಶಯಗಳನ್ನು ಕಳಿಸಿದೆ.

ಜನವರಿ 7, 1979ರಂದು ಪಾಲ್‌ಪೋಟ್ ಆಳ್ವಿಕೆಯಿಂದ ವಿಮೋಚನೆಗೊಂಡು ಕಂಪೂಚಿಯಾದ ಜನತೆ ತನ್ನ ದೇಶದ ಪುನಃನಿರ್ಮಾಣಕ್ಕೆ ತೊಡಗಿತು.

ಸುಮಾರು 4 ವರ್ಷಗಳ ಕಾಲದ ಪಾಲ್‌ಪೋಟ್ ಆಳ್ವಿಕೆಯಲ್ಲಿ ದೇಶದ ಕೃಷಿಸ್ವರೂಪ, ಕೈಗಾರಿಕೆ, ಸಂಪರ್ಕ ವ್ಯವಸ್ಥೆ, ಸಾರಿಗೆ ಮತ್ತು ಶಾಲಾ-ಕಾಲೇಜುಗಳು, ಆಸ್ಪತ್ರೆ ಇತ್ಯಾದಿಗಳು ಹಾಳುಗೆಡವಲ್ಪಟ್ಟವು. ಜನತೆಯನ್ನು ದೈಹಿಕವಾಗಿ ಸದೆಬಡಿಯಲಾಯಿತು. ಸುಮಾರು 3 ಲಕ್ಷಕ್ಕಿಂತಲೂ ಅಧಿಕ ಜನತೆಯನ್ನು ಕೊಲ್ಲಲಾಯಿತು. ಬದುಕುಳಿದವರೂ ಹಸಿವು, ರೋಗ-ರುಜಿನಗಳಿಂದ ನರಳುತ್ತಿದ್ದರು. ಸಮಾಜದ ಪ್ರತಿಯೊಂದು ವಿಭಾಗವೂ ಆಘಾತಕ್ಕೊಳಗಾಗಿ ಈಗ ಎರಡು ವರ್ಷಗಳಿಂದೀಚೆ ಚೇತರಿಸಿಕೊಳ್ಳುತ್ತಿದೆ.

ಸಂಪೂರ್ಣ ಹದಗೆಟ್ಟಿದ್ದ ಪರಿಸ್ಥಿತಿ ವಿಮೋಚನೆಗೊಂಡ ಜನತೆಯ ಮತ್ತು ನಾಯಕತ್ವಕ್ಕೊಂದು ಸವಾಲಾಗಿತ್ತು. ಅನೇಕ ಸಮಾಜವಾದಿ ರಾಷ್ಟ್ರಗಳ, ನೆರೆಯ ವಿಯೆಟ್ನಾಂದ ಸಕಾಲಿಕ ನೆರವಿನಿಂದ ಸಾವಧಾನವಾಗಿ ಚೇತರಿಸಿಕೊಳ್ಳತೊಡಗಿತು. ನಂಸುಳು ಕಾತುರದಿಂದಿದ್ದ ಅಮೇರಿಕನ್ ಸಾಮ್ರಾಜ್ಯವಾದಿಗಳ ಪಿತೂರಿಯನ್ನು ವಿಫಲಗೊಳಿಸಲಾಯಿತು.

ಕಳೆದ ವರ್ಷ, ಕಂಪೂಚಿಯಾಕ್ಕೆ ಮಾನ್ಯತೆ ನೀಡಲು ಭಾರತ ಸರ್ಕಾರವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಒತ್ತಾಯಿಸಿತ್ತು. ಭಾರತದೊಂದಿಗೆ ರಾಜತಾಂತ್ರಿಕ ಸಂಬಂಧ ಸ್ಥಾಪಿಸುವುದಕ್ಕೋಸ್ಕರ ಕಂಪೂಚಿಯಾ ಗಣರಾಜ್ಯದ ಪ್ರತಿನಿಧಿಗಳು ದೆಹಲಿಗೆ ಆಗಮಿಸಿದ್ದಾರೆ. ಭಾರತ-ಕಂಪೂಚಿಯಾಗಳ ಸಂಬಂಧ ಸೌಹಾರ್ದಪೂರಿತವಾಗಿ ವೃದ್ಧಿಸುವ ಆಶಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ವ್ಯಕ್ತಪಡಿಸುತ್ತದೆ.

ಕಂಪೂಚಿಯಾಕೆ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ, ಅಲಿಪ್ತಕೂಟದಲ್ಲಿ ಪ್ರವೇಶದೊರೆಯಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಒತ್ತಾಯಿಸುತ್ತದೆ. ಹೊಸ ಬದುಕನ್ನು ಪುನಃ ರೂಪಿಸಲು ಶ್ರಮಿಸುತ್ತಿರುವ ಕಂಪೂಚಿಯಾಕ್ಕೆ 2ನೇ ವಾರ್ಷಿಕೋತ್ಸವದ ಶುಭ ಸಂದರ್ಭದಲ್ಲಿ ಕ್ರಾಂತೀಕಾರಿ ಅಭಿನಂದನೆಗಳನ್ನು ಸಲ್ಲಿಸುತ್ತಾ, ಕಂಪೂಚಿಯಾ ತನ್ನೆದುರಿರುವ ಹೊಣೆಗಾರಿಕೆಯನ್ನು ಯಶಸ್ವೀಯಾಗಿ ಪೂರೈಸುವುದೆಂಬ ಆಶಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವ್ಯಕ್ತಪಡಿಸುತ್ತದೆ.

o

ನಿರುದ್ಯೋಗ ದಿನಾಚರಣೆ

19-1-81ರಂದು ಮೈಸೂರು ನಗರದ ಕೃಷ್ಣರಾಜ ಸಾಗರ ರಸ್ತೆಯ ಕೈಗಾರಿಕಾ ಕ್ಷೇತ್ರದಲ್ಲಿ, ಡಬ್ಲ್ಯೂ.ಎಫ್.ಟಿ.ಯು. ಕರೆಯ ಮೇರೆಗೆ "ನಿರುದ್ಯೋಗ ದಿನಾಚರಣೆ" ಆಚರಿಸಲಾಯಿತು. ಈ ನಿಮಿತ್ತ ಸೇರಿದ್ದ ಸಭೆಯನ್ನು ಉದ್ದೇಶಿಸಿ ಸಿ.ಐ.ಟಿ.ಯು.ವಿನ ಮುಖಂಡರಾದ ಕಾಂ. ಎಂ. ಎನ್. ಉಗ್ರಪ್ಪ, ಕಾಂ. ಮೋಹನ್‌ಕುಮಾರ್ ಮತ್ತು ಎ.ಐ.ಟಿ.ಯು.ಸಿ. ಮುಖಂಡ ಕಾಂ. ವೆಂಕಟರಾಮನ್‌ರು ಮಾತನಾಡಿ ಕೆಲಸದ ಹಕ್ಕನ್ನು ಮೂಲಭೂತ ಹಕ್ಕು ಎಂದು ಸಂವಿಧಾನದಲ್ಲಿ ಸೇರಿಸಬೇಕೆಂದು ಒತ್ತಾಯಿಸಿದರು.

ನಗರದ 'ಫಾಲ್ಕನ್ ಟೈರ್' ಕೆಲಸಗಾರರು 40 ದಿನಗಳಿಂದ ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಲಾಯಿತು.

●

ಗಮನಿಸಿ

ಫೆಬ್ರವರಿ 5ರಂದು ರಾಜಧಾನಿಗೆ ಆಗಮಿಸಲಿರುವ ರೈತಕಾರ್ಮಿಕರ ಬೃಹತ್ ಜಾಥಾ ನಿಮಿತ್ತ ಐಕ್ಯರಂಗವನ್ನು ವಿಶೇಷ ಸಂಚಿಕೆಯಾಗಿ ತರಲು ನಿರ್ಧರಿಸಲಾಗಿದೆ.

12 ಪುಟಗಳ ಆಕರ್ಷಕ ಲೇಖನಗಳನ್ನೊಳಗೊಂಡ ಪತ್ರಿಕೆಯ ಬೆಲೆಯನ್ನು 1ರೂ. ಇಡಲಾಗಿದೆ. ದಯವಿಟ್ಟು ಓದುಗರು/ಏಜನ್ಸಿದಾರರು ಸಹಕರಿಸಬೇಕಾಗಿ ವಿನಂತಿ.

ವ್ಯವಸ್ಥಾಪಕ ಮಂಡಳಿ

ಮೈಸೂರು ಕಿರ್ಲೋಸ್ಕರ್ ಕಾರ್ಮಿಕರ ಸಮ್ಮೇಳನ

ದಿನಾಂಕ 26-1-81 ಮತ್ತು 27-1-81ರಂದು ಎರಡುದಿನ ಹರಿಹರದಲ್ಲಿ ಕಿರ್ಲೋಸ್ಕರ್ ಕಾರ್ಮಿಕರ ಸಮ್ಮೇಳನವು ಜರುಗಿತು.

26-1-81ರ ಬೆಳಿಗ್ಗೆ 11 ಘಂಟೆಗೆ ಯೂನಿಯನ್‌ನ ಉಪಾಧ್ಯಕ್ಷ ಕಾಂ. ವಿ.ಜೆ.ಕೆ. ನಾಯರ್‌ರು ಧ್ವಜಾರೋಹಣ ಮಾಡುವುದರೊಟ್ಟಿಗೆ ಸಮ್ಮೇಳನ ಪ್ರಾರಂಭವಾಯಿತು. ಇತ್ತೀಚಿಗೆ ಸಂಘದ ಸಂವಿಧಾನವನ್ನು ತಿದ್ದುಪಡಿಮಾಡಿದ ಪ್ರಯುಕ್ತ ಹಲವಾರು ಅಧಿಕಾರಿವರ್ಗವನ್ನು ನಿಯಮಿಸಲು ಈ ವಿಶೇಷ ಸಮ್ಮೇಳನವನ್ನು ಕರೆಯಲಾಗಿತ್ತು.

ಹುಬ್ಬಳ್ಳಿ, ಸತ್ತೂರು ಮತ್ತು ಹರಿಹರದ ಫ್ಯಾಕ್ಟರಿಗಳಿಂದ 148 ಪ್ರತಿನಿಧಿಗಳು ಭಾಗವಹಿಸಿದ್ದರು. ರೈತ ಕಾರ್ಮಿಕರ ಜಾಥಾವನ್ನು ಬೆಂಬಲಿಸುವ ಬಗ್ಗೆ, ಸಾರ್ವಜನಿಕ ಕೈಗಾರಿಕೆಯ ಕಾರ್ಮಿಕರ ಹೋರಾಟವನ್ನು ಬೆಂಬಲಿಸುವ ಮತ್ತು ರಾಷ್ಟ್ರೀಯ ಭದ್ರತಾ ಶಾಸನವನ್ನು ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ದಿನಾಂಕ 27ರಂದು ಸಮ್ಮೇಳನವನ್ನು ಉದ್ದೇಶಿಸಿ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾಯರು ಮಾತನಾಡುತ್ತಾ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು.

ಸಂಘದ ಚಟುವಟಿಕೆ ವ್ಯವಸ್ಥಿತ ರೂಪದಲ್ಲಿ ನಡೆಯಲು ಸದೃಢ ಸಂಘಟನೆ ಕಟ್ಟುವ ಸಂಘದ ತಿದ್ದುಪಡಿಯಾದ ಸಂವಿಧಾನದ ಅಡಿಯಲ್ಲಿ ಈ ಕೆಳಕಂಡ ಕೇಂದ್ರಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಕಾಂ. ಆರ್. ಜಿ. ಸ್ಥಳೇಕರ್, ಉಪಾಧ್ಯಕ್ಷರುಗಳಾಗಿ ಕಾಂ. ವಿ.ಜೆ.ಕೆ. ನಾಯರ್, ಕೆ. ಎಂ. ರಾವ್ (ಹುಬ್ಬಳ್ಳಿ), ಎಲ್. ಡಿ. ಭೋಸಲೆ (ಸತ್ತೂರು), ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಎಸ್.ಜಿ. ಪಠಾಣ, ಸಂಘಟನಾ ಕಾರ್ಯದರ್ಶಿ ಎಂ. ಈ. ಹುಸೇನ್, ಕೈಗಾರಿಕಾ ವಿವಾದದ ಕಾರ್ಯದರ್ಶಿ ಡಿ. ಜಿ. ಜೋಶಿ ಮತ್ತು ವಿ. ಎಂ. ಪೂಜಾರ್ ಉಪಕಾರ್ಯದರ್ಶಿ ಎಸ್. ಜಿ. ಬಡಿಗೇರ್, ಆರ್. ಬಿ. ಅಂಗಡಿ ಮತ್ತು ಫರ್ನಾಂಡಿಸ್, ಖಜಾಂಚಿ ಎ. ಮುರುಗೇಶನ್, ಸಹಖಜಾಂಚಿ ಎಚ್. ಬಸಪ್ಪ ಅವರುಗಳಲ್ಲದೇ 24 ಜನರ ಕೇಂದ್ರ ಕಾರ್ಯಕಾರಿ ಮತ್ತು 46 ಜನರ ಜನರಲ್ ಕೌನ್ಸಿಲನ್ನು ಚುನಾಯಿಸಲು ಸಮ್ಮೇಳನ ಒಪ್ಪಿಗೆ ನೀಡಲಾಯಿತು. ಈ ಸಮ್ಮೇಳನ ವಿಶಿಷ್ಟವಾಗಿದ್ದು ಆಕರ್ಷಣೀಯವಾಗಿತ್ತು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR M. K. BHAT